# ಜನತಾವಾಣಿ


ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ
ಗುರುವಾರ, ಮಾರ್ಚ್ 13, 2025

ಸಂಪುಟ : 51 ಸಂಚಿಕೆ : 300 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com







# ವೀರಶೈವ-ಲಿಂಗಾಯತರು ಜಾಗೃತರಾಗಲಿ

## ಶ್ರೀ ರೇಣುಕಾಚಾರ್ಯರ ಜಯಂತಿ ಸಮಾರಂಭದಲ್ಲಿ ಅಥಣಿ ಎಸ್.ವೀರಣ್ಣ



ದಾವಣಗೆರೆ, ಮಾ. 12- ವೀರಶೈವ ಲಿಂಗಾಯತ ಸಮಾಜದ ಪರಿಸ್ಥಿತಿ ಸೂಕ್ಷ್ಮವಾಗಿದೆ. ಸಮಾಜದ ಜನತೆ ಜಾಗೃತಗೊಳ್ಳುವ ಅಗತ್ಯವಿದೆ ಎಂದು ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಉಪಾಧ್ಯಕ್ಷ ಡಾ. ಅಥಣಿ ಎಸ್. ವೀರಣ್ಣ ಹೇಳಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಸಹಯೋಗದಲ್ಲಿ ನಗರದ ಅಭಿನವ ರೇಣುಕ ಮಂದಿರದಲ್ಲಿ ಬುಧವಾರ ಹಮ್ಮಿಕೊಳ್ಳಲಾಗಿದ್ದ ಶ್ರೀ ಮದ್ವೀರಶೈವ ಮಹಾಮತ ಸ್ಥಾಪನಾಚಾರ್ಯರಾದ ಶ್ರೀ ಆದಿ ಜಗದ್ಗುರು ರೇಣುಕಾಚಾರ್ಯರ ಜಯಂತಿ ಯುಗಮಾನೋತ್ಸವದ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು.

ರಾಜಕೀಯ ಕ್ಷೇತ್ರದಲ್ಲಿ ಅತಿ ಹೆಚ್ಚು ಜನ ಸಂಖ್ಯೆಯ ಸಮಾಜ ನಮ್ಮದು ಎಂದು ಕೊಂಡಿದ್ದೇವೆ. ಆದರೆ ಇತ್ತೀಚಿನ ವರದಿಯಲ್ಲಿ ನಮ್ಮ ಸಮಾಜದವರು ಶೇ.13 ರಿಂದ 14ರಷ್ಟು ಮಾತ್ರ ಎಂದು ತಿಳಿದು ಬಂದಿದೆ ಎಂದರು.

ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಸರ್ಕಾರ ಜಾತಿ ಗಣತಿ ನಡೆಸಿದೆ. ಆದರೆ ಅದಿನ್ನೂ ಬಯಲಿಗೆ ಬಂದಿಲ್ಲ. ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾದ ಡಾ. ಶಾಮನೂರು ಶಿವಶಂಕರಪ್ಪನವರು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಜಾತಿ ಗಣತಿ ವರದಿಯನ್ನು ನಾವು ಒಪ್ಪುವುದಿಲ್ಲ ಎಂದು ನೇರವಾಗಿಯೇ ಹೇಳಿದ್ದಾರೆ. ಒಕ್ಕಲಿಗರೂ ಸಹ ಈಗ ಜಾತಿ ಗಣತಿ ವಿರೋಧಿಸುತ್ತಿದ್ದಾರೆ ಎಂದರು.

ವೀರಶೈವ ಹಾಗೂ ಲಿಂಗಾಯತ ಬೇರೆ ಬೇರೆ ಎಂದು ಸಮಾಜವನ್ನು ಒಡೆಯುವ ಪ್ರಯತ್ನ ನಡೆಯಿತು. ಆದರೆ ಶಾಮನೂರು ಶಿವಶಂಕರಪ್ಪನವರು ನನಗೆ ರಾಜಕೀಯಕ್ಕಿಂತ ಸಮಾಜ ಮುಖ್ಯ ಎಂದು ಹೇಳಿ, ವೀರಶೈವ-ಲಿಂಗಾಯತ ಎರಡೂ ಒಂದೇ ಎಂದು ಹೋರಾಟ ನಡೆಸಿದ ಫಲದಿಂದ ಇಂದು ಸಮಾಜ ಸಂಘಟಿತವಾಗಿದೆ ಎಂದು ಹೇಳಿದರು.

ನೂರಾರು ವರ್ಷಗಳಿಂದಲೂ ಮಠಗಳು, ಮಠಾಧೀಶರು ವಿದ್ಯೆ, ಅನ್ನ ದಾಸೋಹದ ಮೂಲಕ ಜನರಿಗೆ ಒಳಿತು ಮಾಡುತ್ತಿರುವುದು ಶ್ಲಾಘನೀಯ ಎಂದರು.

ಮತ್ತೋರ್ವ ಮಹಾಸಭಾದ ರಾಷ್ಟ್ರೀಯ ಉಪಾಧ್ಯಕ್ಷ ಅಣಬೇರು ರಾಜಣ್ಣ ಮಾತನಾಡುತ್ತಾ, ಇರುವಷ್ಟು ದಿನ ಒಳ್ಳೆಯದು ಮಾಡಿಕೊಂಡು ಇರೋಣ. ಒಳ್ಳೆಯದನ್ನು ಮಾಡಲಾಗದಿದ್ದರೆ ಕೆಟ್ಟದ್ದನ್ನು ಮಾಡದೇ ಇರುವುದು ಉತ್ತಮ ಎಂದರು.

ರೇಣುಕಾಚಾರ್ಯರ ಕಾಲದಿಂದಲೂ ಸಮಾಜದಲ್ಲಿ ಮಠಾಧೀಶರ ಕೊಡುಗೆ ದೊಡ್ಡದು. ಜನರು ಧರ್ಮದಿಂದ ನಡೆಯಬೇಕು. ಉತ್ತಮ ಆಹಾರ ಪದ್ಧತಿ ಹಾಗೂ ಉತ್ತಮ ಆಲೋಚನೆಗಳಿಂದ ಮನಸ್ಸನ್ನು ಹಾಗೂ ಶರೀರವನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಬೇಕು ಎಂದು ಸಲಹೆ ನೀಡಿದರು.

ಕೆಟ್ಟ ಯೋಚನೆಗಳನ್ನು ಬಿಡಬೇಕು. ಉತ್ತಮ ಪುಸ್ತಕಗಳನ್ನು ಓದುವುದು ಹಾಗೂ ಉತ್ತಮ ಹವ್ಯಾಸಗಳನ್ನು ರೂಢಿಸಿಕೊಂಡು ದೇವರು ನಮಗೆ ನೀಡಿರುವ ಸಮಯವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಜಿಲ್ಲಾಧಿಕಾರಿ ಜಿ.ಗಂಗಾಧರ ಸ್ವಾಮಿ ಮಾತನಾಡುತ್ತಾ, ಸಮಾಜದಲ್ಲಿ (4ನೇ ಪುಟಕ್ಕೆ)

# ಗ್ಯಾರಂಟಿ ಸಮಿತಿ ವಿರುದ್ಧ ದೂರು

## ತೆರಿಗೆ ಹಣ ಕಾರ್ಯಕರ್ತರಿಗೆ: ರಾಜ್ಯಪಾಲರ ಮಧ್ಯಪ್ರವೇಶಕ್ಕೆ ಬಿಜೆಪಿ ಒತ್ತಾಯ

ಬೆಂಗಳೂರು, ಮಾ. 12 - ಸಾರ್ವಜನಿಕರ ತೆರಿಗೆ ಹಣವನ್ನು ಕಾಂಗ್ರೆಸ್ ಕಾರ್ಯಕರ್ತರಿಗೆ ಸರ್ಕಾರ ಹಂಚಲು ಹೊರಟಿರುವುದನ್ನು ಖಂಡಿಸಿ ಬಿಜೆಪಿ-ಜೆಡಿಎಸ್ ಸದಸ್ಯರು ಸದನದ ಒಳಗೆ ಮತ್ತು ಹೊರಗೆ ಪ್ರತಿಭಟನೆ ನಡೆಸಿ, ರಾಜ್ಯಪಾಲರ ಮಧ್ಯಪ್ರವೇಶಕ್ಕೆ ಒತ್ತಾಯಿಸಿದ್ದಾರೆ.

ಗ್ಯಾರಂಟಿ ಯೋಜನೆ ಅನುಷ್ಠಾನ ಖಾತ್ರಿ ನೆಪದಲ್ಲಿ ವಾರ್ಷಿಕ ನೂರಾರು ಕೋಟಿ ರೂ.ಗಳನ್ನು ಪಕ್ಷದ ಕಾರ್ಯಕರ್ತರಿಗೆ ಹಂಚಲು ಹೊರಟಿದ್ದು ಇದನ್ನು ತಡೆಯುವಂತೆ ಬಿಜೆಪಿ-ಜೆಡಿಎಸ್ ಸದಸ್ಯರು ಇಂದು ರಾಜ್ಯಪಾಲರ ಮೊರೆ ಹೋದರು.

ಗ್ಯಾರಂಟಿ ಯೋಜನೆ ಅನುಷ್ಠಾನ ಮುಂದಿಟ್ಟುಕೊಂಡು ಅಭಿವೃದ್ಧಿಯನ್ನು ಕೈಗೊಳ್ಳದ ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರ, ಸಂಪನ್ಮೂಲ ಕ್ರೋಢೀಕರಣಕ್ಕೂ ಒತ್ತು ನೀಡದೆ, ಕೇವಲ ಪ್ರಚಾರಕ್ಕೆ ಸೀಮಿತಗೊಂಡು ರಾಜ್ಯವನ್ನು ಆರ್ಥಿಕ ಸಂಕಷ್ಟಕ್ಕೆ ಸಿಲುಕಿಸುತ್ತಿದೆ. ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟು ಕೊಂಡು ತನ್ನ ಪಕ್ಷದ ಕಾರ್ಯಕರ್ತರಿಗೆ ಬೊಕ್ಕಸದಿಂದ ಹಣ ಹಂಚಲು ಹೊರಟಿದ್ದಾರೆ ಎಂದು (2ನೇ ಪುಟಕ್ಕೆ)

### ಗ್ಯಾರಂಟಿ ಸಮಿತಿಗಳಿಂದ ಶಾಸಕರ ಘನತೆಗೆ ಕುಂದಾಗಿಲ್ಲ

ಬೆಂಗಳೂರು, ಮಾ. 12 - ಗ್ಯಾರಂಟಿ ಸಮಿತಿಗಳಿಂದ ಶಾಸಕರ ಘನತೆಗೆ ಕುಂದಾಗಿಲ್ಲ, ಈ ಕುರಿತು ಜಿಲ್ಲಾಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಿದ್ದೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲಿ ಸಮರ್ಥಿಸಿಕೊಂಡಿದ್ದಾರೆ.

ಪ್ರತಿಪಕ್ಷದ ನಾಯಕರ ಆರೋಪಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ವಿಧಾನಮಂಡಲದ ಅಧಿವೇಶನ ಮುಗಿಯುತ್ತಿದ್ದಂತೆ ಸಭೆ ಕರೆದು ತಕರಾರುಗಳನ್ನು ಪರಿಹರಿಸಲಾಗುವುದು ಎಂದರು.

ಪಕ್ಷ ಅಧಿಕಾರಕ್ಕೆ ಬಂದಾಗ ಕಾರ್ಯಕರ್ತರಿಗೆ ಆಡಳಿತದಲ್ಲಿ ಅವಕಾಶ ನೀಡುವುದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ, ಮಹಾರಾಷ್ಟ್ರದಲ್ಲಿ ಎಲ್ಲಾ ಶಾಸಕರ ಕಚೇರಿಗೂ ಆರ್‌ಎಸ್ ಎಸ್ ಕಾರ್ಯಕರ್ತರನ್ನು ನೇಮಿಸಿಕೊಳ್ಳಲಾಗುತ್ತಿದೆ ಎಂದು ಉಲ್ಲೇಖಿಸಿದರು.

# ಹೆತ್ತವರ ಆರೈಕೆ ಮಾಡದ ಮಕ್ಕಳಿಗೆ ಆಸ್ತಿ ದೊರೆಯದಂತೆ ವಿಲ್ ರದ್ದು

ಬೆಂಗಳೂರು, ಮಾ. 12 - ತಂದೆ, ತಾಯಿ ಆರೈಕೆ ಮಾಡದ ಮಕ್ಕಳು ಅಥವಾ ಸಂಬಂಧಿಕರಿಗೆ ಚರ-ಸ್ಥಿರ ಆಸ್ತಿ ದೊರೆಯದಂತೆ ಮರಣ ಶಾಸನ (ವಿಲ್) ರದ್ದು ಮಾಡುವ ಅವಕಾಶವನ್ನು 'ಪೋಷಕರು ಮತ್ತು ಹಿರಿಯ ನಾಗರಿಕರ ನಿರ್ವಹಣೆ ಮತ್ತು ಕಲ್ಯಾಣ ಕಾಯ್ದೆ-2007 ನೀಡಿದೆ ಎಂದು ಸಚಿವ ಕೃಷ್ಣಭೈರೇಗೌಡ ವಿಧಾನ ಪರಿಷತ್‌ಗೆ ತಿಳಿಸಿದ್ದಾರೆ.

**ಪೋಷಕರು ಮತ್ತು ಹಿರಿಯ ನಾಗರಿಕರ ನಿರ್ವಹಣೆ ಮತ್ತು ಕಲ್ಯಾಣ ಕಾಯ್ದೆಯಡಿ ಅವಕಾಶ**

ಸದಸ್ಯೆ ಬಲ್ಕೀಸ್ ಬಾನು ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಇತ್ತೀಚಿನ ದಿನಗಳಲ್ಲಿ ಮಕ್ಕಳು ತಮ್ಮ ತಂದೆ ತಾಯಿಯ ಆರೈಕೆ ಮಾಡದ ಹಲವು ಪ್ರಕರಣಗಳು ಬೆಳಕಿಗೆ ಬಂದಿವೆ, ಆರೈಕೆ ಮಾಡದ ಮಕ್ಕಳು ಅಥವಾ ಸಂಬಂಧಿಕರ ಹೆಸರಿಗೆ ಮಾಡಿರುವ ವಿಲ್ ಅಥವಾ ದಾನಪತ್ರವನ್ನು ರದ್ದು ಮಾಡುವ ಅಧಿಕಾರ ಹಿರಿಯ ನಾಗರಿಕರಿಗೆ ಇದೆ ಎಂದರು. ಪೋಷಕರು ಮತ್ತು (2ನೇ ಪುಟಕ್ಕೆ)



ದಾವಣಗೆರೆ: ಶ್ರೀ ರೇಣುಕಾಚಾರ್ಯ ಭಾವಚಿತ್ರದ ಸಾರೋಟ ಉತ್ಸವಕ್ಕೆ ಕರೆ ತಂದಿದ್ದ ಗಜರಾಜನಿಗೆ ಮಾವುತ ಸ್ನಾನ ಮಾಡಿಸುತ್ತಿರುವುದು. ಬಿಸಿಲಿನ ಬೇಗೆಗೆ ಮನುಷ್ಯರಷ್ಟೇ ಅಲ್ಲ, ಗಜರಾಜನೂ ಬಸವಳಿದಿದ್ದನೇನೋ.


# ಬಿಇಎಲ್ ಜೊತೆ ರಕ್ಷಣಾ ಸಚಿವಾಲಯದ 2906 ಕೋಟಿ ರೂ. ಖರೀದಿ ಒಪ್ಪಂದ

ನವದೆಹಲಿ, ಮಾ. 12 - ಸರ್ಕಾರಿ ಸ್ವಾಮ್ಯದ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನಿಂದ (ಬಿಇಎಲ್) ವಾಯುಪಡೆಗಾಗಿ ರಡಾರ್ ಖರೀದಿಸಲು ರಕ್ಷಣಾ ಸಚಿವಾಲಯ ಒಪ್ಪಂದ ಮಾಡಿಕೊಂಡಿದೆ. ಇದರ ಮೌಲ್ಯ 2,906 ಕೋಟಿ ರೂ. ಆಗಿದೆ.

ರಡಾರ್ ಅನ್ನು ದೇಶೀಯವಾಗಿ ವಿನ್ಯಾಸ ಹಾಗೂ ಅಭಿವೃದ್ಧಿಗೊಳಿಸಲಾಗುವುದು. ರಕ್ಷಣಾ ಸಂಶೋಧನಾ ಸಂಸ್ಥೆಯಾದ ಡಿಆರ್‌ಡಿಓ ಈ ರಡಾರ್‌ಗಳನ್ನು ರೂಪಿಸಲಿದೆ.

ಈ ರಡಾರ್‌ಗಳು ವೇಗವಾಗಿ ಚಲಿಸುವ ಸಮರ ವಿಮಾನಗಳಿಂದ ಹಿಡಿದು, ನಿಧಾನವಾಗಿ ಚಲಿಸುವ ಮಾನವ ರಹಿತ ವೈಮಾನಿಕ ವಾಹನಗಳು ಹಾಗೂ ಹೆಲಿಕಾಪ್ಟರ್‌ಗಳನ್ನು ಗುರುತಿಸುವ ಸಾಮರ್ಥ್ಯ ಹೊಂದಿರಲಿವೆ. (4ನೇ ಪುಟಕ್ಕೆ)

# ಕುಸುಬೆ ಖರೀದಿಗೆ ಶೀಘ್ರ ನೋಂದಣಿ



ಬೆಂಗಳೂರು, ಮಾ. 12 - ಬೆಂಬಲ ಬೆಲೆ ಯೋಜನೆಯಲ್ಲಿ ಕುಸುಬೆ ಖರೀದಿ ಪ್ರಕ್ರಿಯೆ ಶೀಘ್ರದಲ್ಲಿ ಆರಂಭವಾಗಲಿದ್ದು, ರೈತರು ನೋಂದಣಿ ಮಾಡಿಸಿಕೊಳ್ಳಬೇಕು ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಮನವಿ ಮಾಡಿದ್ದಾರೆ.

ಬೀದರ್, ಧಾರವಾಡ, ದಾವಣಗೆರೆ, ಗದಗ, ವಿಜಯಪುರ, ಕಲಬುರಗಿ, ಚಿತ್ರದುರ್ಗ, ಕೊಪ್ಪಳ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಖರೀದಿ ಕೇಂದ್ರಗಳನ್ನು ಆರಂಭಿಸಲಿದ್ದು, ಪ್ರತಿ ಕ್ವಿಂಟಲ್‌ಗೆ 5,940 ರೂ.ಗಳನ್ನು ನಿಗದಿ ಪಡಿಸ ಲಾಗಿದೆ. ಪ್ರತಿ ಎಕರೆಗೆ ಐದು (4ನೇ ಪುಟಕ್ಕೆ)

# ಹಣದುಬ್ಬರ ಶೇ.4ಕ್ಕಿಂತ ಕಡಿಮೆ ಹಂತಕ್ಕೆ ಕುಸಿತ

ನವದೆಹಲಿ, ಮಾ. 12 - ಆಹಾರ ವಸ್ತುಗಳ ಬೆಲೆ ಇಳಿಕೆ ಕಾರಣದಿಂದಾಗಿ ಫೆಬ್ರವರಿಯಲ್ಲಿ ಚಿಲ್ಲರೆ ಹಣದುಬ್ಬರ ದರ ರಿಸರ್ವ್ ಬ್ಯಾಂಕ್ ಅಪೇಕ್ಷಿತ ಮಟ್ಟವಾದ ಶೇ. 4ಕ್ಕಿಂತ ಕಡಿಮೆ ಹಂತಕ್ಕೆ ಬಂದಿದೆ.

ಹಣದುಬ್ಬರ ದರ ತೀವ್ರವಾಗಿ ಇಳಿಕೆಯಾಗಿರುವ ಕಾರಣ ಏಪ್ರಿಲ್ 9ರಂದು ರಿಸರ್ವ್ ಬ್ಯಾಂಕ್ ಬಡ್ಡಿ ದರ ಇಳಿಕೆ ಮಾಡುವ ಸಾಧ್ಯತೆ ಹೆಚ್ಚಾಗಿದೆ. ಫೆಬ್ರವರಿ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ ಏಳು ತಿಂಗಳಲ್ಲೇ ಅತಿ ಕಡಿಮೆ ಶೇ. 3.61 ಕ್ಕೆ ತಲುಪಿದೆ. ಕಳೆದ ವರ್ಷ ಇದೇ ತಿಂಗಳಲ್ಲಿ (5ನೇ ಪುಟಕ್ಕೆ)








Distributor: Sanghvi Agencies: M G Road, Davanagere- 577001 | For trade enquiry, contact: 77955 55193 / 97420 20608 | Also available on: blinkit zepto

Available at: JustBake: (Opp. Cafe Coffee Day) Vidyanagar, Davanagere | Patil Dinasi: Kunduvada Kere Road, Davanagere | Charvi Authentic: Kunduvada Kere Road, Davanagere

Product images presented on this advertisement are intended for reference only. The actual product packaging or wrapping you receive may differ from these displayed images. Variations in appearance, design, or packaging may occur between the illustrated representation and the physical item delivered to you.




## ಜಿಗಳಿಯಲ್ಲಿ ಸಂಭ್ರಮದ ಉಚ್ಚಾಯ

ಮಲೇಬೆನ್ನೂರು, ಮಾ.12- ಜಿಗಳಿ ಗ್ರಾಮದ ಆರಾಧ್ಯ ದೈವ ಶ್ರೀ ರಂಗನಾಥ ಸ್ವಾಮಿ ರಥೋತ್ಸವದ ಅಂಗವಾಗಿ ಬುಧವಾರ ಬೆಳಿಗ್ಗೆ ಸ್ವಾಮಿಯ ಉಚ್ಚಾಯ (ಗಜ ಉತ್ಸವ) ಸಂಭ್ರಮದಿಂದ ನಡೆಯಿತು. ಸಂಜೆ ಶಸ್ತ್ರ ಕಾರ್ಯಕ್ರಮಗಳು, ರಾತ್ರಿ ಹರಿಸೇವೆ ನಡೆದವು.

ಶ್ರೀ ರಂಗನಾಥ ಸ್ವಾಮಿಗೆ ಮಾಡಿರುವ ಪುಷ್ಪಾಲಂಕಾರ ಭಕ್ತರ ಗಮನ ಸೆಳೆಯುತ್ತಿದೆ. ತಡರಾತ್ರಿ (ಗುರುವಾರ ಬೆಳಗಿನ ಜಾವ) ಶ್ರೀ ರಂಗನಾಥ ಸ್ವಾಮಿ ರಥೋತ್ಸವವು ಶ್ರೀ ಬೀರಲಿಂಗೇಶ್ವರ, ಯಲವಟ್ಟಿಯ ಶ್ರೀ ಆಂಜನೇಯ ಸ್ವಾಮಿ ಹಾಗೂ ಜಿ. ಬೇವಿನಹಳ್ಳಿಯ ಶ್ರೀ ಆಂಜನೇಯ ಸ್ವಾಮಿ ಜೊತೆಗೂಡಿ ಬ್ರಾಹ್ಮೀ ಮುಹೂರ್ತದಲ್ಲಿ ವೈಭವದೊಂದಿಗೆ ಜರುಗಿತು.

ನಾಳೆ ಗುರುವಾರ ಬೆಳಿಗ್ಗೆ 10.30 ರಿಂದ ಜವಳ ಮುದ್ರೆ ಇತ್ಯಾದಿ ಕಾರ್ಯಕ್ರಮಗಳು ನಡೆಯಲಿದ್ದು, ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 3 ಗಂಟೆಯವರೆಗೆ ಶ್ರೀ ಅಂಬಾ ಭವಾನಿ ದೇವಸ್ಥಾನ ಮತ್ತು ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನಗಳ ಆವರಣದಲ್ಲಿ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ. ಸಂಜೆ ಓಕಳಿ ನಂತರ ಕಂಕಣ ವಿಸರ್ಜನೆ ಮಾಡಲಾಗುವುದು.

# ತ್ರಿಭಾಷಾ ಸೂತ್ರ : ಮತ್ತೆ ಕೇಂದ್ರ ತಮಿಳುನಾಡು ನಡುವೆ ಸಂಘರ್ಷ

## ದಶಕಗಳ ಹಳೆಯ ಹಿಂದಿ ಹೇರಿಕೆಯ ಅಪಸ್ವರಕ್ಕೆ ಮರು ಜೀವ

ನವದೆಹಲಿ, ಮಾ. 12 - ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) 2020, ಅನ್ವಯ ತ್ರಿಭಾಷಾ ಸೂತ್ರವನ್ನು ಜಾರಿಗೆ ತರಲು ಕೇಂದ್ರ ಸರ್ಕಾರ ಮುಂದಾಗಿದೆ. ಇದು ಕೇಂದ್ರ ಹಾಗೂ ಡಿಎಂಕೆ ನೇತೃತ್ವದ ತಮಿಳುನಾಡು ಸರ್ಕಾರದ ನಡುವೆ ಸಂಘರ್ಷಕ್ಕೆ ಕಾರಣವಾಗಿದೆ. ಕೇಂದ್ರ ಸರ್ಕಾರ ಜಾರಿಗೆ ತರಲು ಹೊರಟಿರುವ ತ್ರಿಭಾಷಾ ಸೂತ್ರದ ವಿವರ ಈ ರೀತಿ ಇದೆ :

**ತ್ರಿಭಾಷ ಸೂತ್ರ ಎಂದರೇನು?**

ಎನ್‌ಇಪಿ 2020 ರ ಅನ್ವಯ ವಿದ್ಯಾರ್ಥಿಗಳು ಮೂರು ಭಾಷೆಗಳನ್ನು ಕಲಿಯಬೇಕಿದೆ. ಇದರಲ್ಲಿ ಕನಿಷ್ಠ ಎರಡು ಭಾರತೀಯ ಭಾಷೆಗಳಾಗಿರಬೇಕು. ಈ ಸೂತ್ರ ಸರ್ಕಾರಿ ಹಾಗೂ ಖಾಸಗಿ ಶಾಲೆಗಳೆರಡಕ್ಕೂ ಅನ್ವಯವಾಗಲಿದೆ. ಯಾವ ಭಾಷೆ ಕಲಿಸಬೇಕು ಎಂಬುದು ರಾಜ್ಯಗಳಿಗೆ ಬಿಟ್ಟ ವಿಷಯ. ಇದರಲ್ಲಿ ಕೇಂದ್ರ ಸರ್ಕಾರದ ಯಾವುದೇ ಹೇರಿಕೆ ಇಲ್ಲ.

**ತ್ರಿಭಾಷಾ ಸೂತ್ರದ ಇತಿಹಾಸವೇನು?**

1964-66 ರಲ್ಲಿ ಶಿಕ್ಷಣ ಆಯೋಗ ಮೊದಲ ಬಾರಿಗೆ 3 ಭಾಷೆಗಳ ಸೂತ್ರ ಪ್ರಸ್ತಾಪಿಸಿತ್ತು. ಈ ಆಯೋಗವನ್ನು ಕೊಠಾರಿ ಆಯೋಗ ಎಂದು ಕರೆಯಲಾಗುತ್ತದೆ. 1968ರಲ್ಲಿ ಆಗಿನ ಪ್ರಧಾನ ಮಂತ್ರಿ ಇಂದಿರಾಗಾಂಧಿ ಅವರು ಆಯೋಗದ ಶಿಫಾರಸ್ಸಿನಂತೆ ಶಿಕ್ಷಣ ಕುರಿತ ರಾಷ್ಟ್ರೀಯ ನೀತಿಗೆ (ಎನ್‌ಪಿಇ) ಒಪ್ಪಿಗೆ ನೀಡಿದ್ದರು. 1986ರಲ್ಲಿ ಪ್ರಧಾನ ಮಂತ್ರಿ ರಾಜೀವ್ ಗಾಂಧಿ ಅವರು ಎನ್‌ಪಿಇ ಮುಂದುವರೆಸಿದ್ದರು. 1992 ರಲ್ಲಿ ನರಸಿಂಹ ರಾವ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಈ ನೀತಿಯನ್ನು ಪರಿಷ್ಕರಿಸಿತ್ತು

ತ್ರಿಭಾಷಾ ಸೂತ್ರದ ಅನ್ವಯ ವಿದ್ಯಾರ್ಥಿಗಳು ಮಾತೃಭಾಷೆ ಇಲ್ಲವೇ ಪ್ರಾಂತೀಯ ಭಾಷೆ, ಅಧಿಕೃತ ಭಾಷೆ ಹಾಗೂ ಆಧುನಿಕ ಭಾರತ ಇಲ್ಲವೇ ಯುರೋಪಿನ ಭಾಷೆ ಒಂದನ್ನು ಕಲಿಯಬೇಕಿದೆ.

**ತ್ರಿಭಾಷಾ ಸೂತ್ರದ ಬಗ್ಗೆ ಎನ್‌ಇಪಿ-2020 ಹೇಳುವುದೇನು?**

ಶಾಲಾ ಹಂತದಲ್ಲಿ ಬಹು ಭಾಷೆಗಳಿಗೆ ಉತ್ತೇಜನ ನೀಡಲು ಆದಷ್ಟು ಶೀಘ್ರ ತ್ರಿಭಾಷಾ ಸೂತ್ರ ಜಾರಿಗೆ ತರಬೇಕು ಎಂದು ಎನ್‌ಇಪಿ ತಿಳಿಸುತ್ತಿದೆ. ಸಂವಿಧಾನ ದಲ್ಲಿರುವ ಅಂಶಗಳು, ಜನರು, ರಾಜ್ಯ ಮತ್ತು ಒಕ್ಕೂಟಗಳ ಆಶಯ, ಬಹು ಭಾಷೆಗಳಿಗೆ ಉತ್ತೇಜನ, ರಾಷ್ಟ್ರದ ಐಕ್ಯತೆಯನ್ನು ಗಮನದಲ್ಲಿಟ್ಟುಕೊಂಡು ಈ ಸೂತ್ರ ಜಾರಿಗೆ ತರಬೇಕು ಎಂದು ತಿಳಿಸಲಾಗಿದೆ.

ಆದರೆ ತ್ರಿಭಾಷಾ ಸೂತ್ರದಲ್ಲಿ ಹೆಚ್ಚಿನ ಹೊಂದಾಣಿಕೆ ಇದೆ. ಯಾವುದೇ ಭಾಷೆಯನ್ನು ಯಾವುದೇ ರಾಜ್ಯದ ಮೇಲೆ ಹೇರುವುದಿಲ್ಲ. ಮಕ್ಕಳು ಯಾವ ಭಾಷೆ ಕಲಿಯಬೇಕು ಎಂಬುದನ್ನು ರಾಜ್ಯ ಸರ್ಕಾರಗಳು ನಿರ್ಧರಿಸಬೇಕಿದೆ. ವಿದ್ಯಾರ್ಥಿಗಳಿಗೂ ಭಾಷೆಗಳ ಆಯ್ಕೆಯಲ್ಲಿ ಅವಕಾಶ ಇದೆ. ಆದರೆ, ಮೂರರಲ್ಲಿ ಎರಡು ಭಾಷೆಗಳು ಭಾರತದವೇ ಆಗಿರಬೇಕು.

**ವಿದೇಶಿ ಭಾಷೆಗಳು ಯಾವವು?**

ಎನ್‌ಇಪಿ 2020ರ ಅನ್ವಯ ಭಾರತೀಯ ಭಾಷೆ ಹಾಗೂ ಇಂಗ್ಲಿಷ್ ಜೊತೆಗೆ ವಿದ್ಯಾರ್ಥಿಗಳು ಕೊರಿಯಾ, ಜಪಾನ್, ಫ್ರೆಂಚ್, ಜರ್ಮನ್ ಹಾಗೂ ಸ್ಪ್ಯಾನಿಶ್ ಸೇರಿದಂತೆ ವಿದೇಶಿ ಭಾಷೆಗಳನ್ನು ಕಲಿಯಬಹುದು.

**ತಮಿಳುನಾಡು ವಿರೋಧವೇಕೆ?**

ದಶಕಗಳಿಂದಲೂ ತಮಿಳುನಾಡು ತ್ರಿಭಾಷಾ ಸೂತ್ರವನ್ನು ವಿರೋಧಿಸುತ್ತಿದೆ. 1937ರಲ್ಲಿ ಸಿ. ರಾಜಗೋಪಾಲಚಾರಿ ನೇತೃತ್ವದ ಆಗಿನ ಮದ್ರಾಸ್ ಸರ್ಕಾರ ಶಾಲೆಗಳಲ್ಲಿ ಹಿಂದಿ ಕಲಿಕೆ ಕಡ್ಡಾಯ ಗೊಳಿಸಿತ್ತು. ಇದರ ವಿರುದ್ಧ ಜಸ್ಟಿಸ್ ಪಾರ್ಟಿ ಹಾಗೂ ದ್ರಾವಿಡ ಮುಖಂಡರು ತೀವ್ರ ಹೋರಾಟ ನಡೆಸಿದ್ದರು. 1940ರಲ್ಲಿ ಈ ನೀತಿಯನ್ನು ವಾಪಸ್ ಪಡೆಯಲಾಯಿತು. ಆದರೆ ಆಗಿನಿಂದಲೂ ಹಿಂದಿ ವಿರೋಧಿ ಮನೋಭಾವ ಮುಂದುವರೆದಿದೆ.

1968ರಲ್ಲಿ ತ್ರಿಭಾಷಾ ಸೂತ್ರ ಜಾರಿಗೆ ತರಲಾಗಿತ್ತು. ಆಗಲೂ ತಮಿಳುನಾಡು ವಿರೋಧಿಸಿತ್ತು. ಆಗಿನ ಮುಖ್ಯಮಂತ್ರಿ ಸಿ.ಎನ್. ಅಣ್ಣಾದೊರೈ ಅವರು ರಾಜ್ಯದಲ್ಲಿ ಎರಡು ಭಾಷೆ ನೀತಿ ಜಾರಿಗೆ ತಂದಿದ್ದರು. ರಾಜ್ಯದಲ್ಲಿ ತಮಿಳು ಹಾಗೂ ಇಂಗ್ಲಿಷ್ ಅಷ್ಟೇ ಕಲಿಸಲಾಗುತ್ತಿದೆ. ತ್ರಿಭಾಷಾ ಸೂತ್ರ ಪಾಲಿಸದ ಏಕೈಕ ರಾಜ್ಯ ತಮಿಳುನಾಡು ಆಗಿದೆ.

**ಹೊಸ ಸಂಘರ್ಷಕ್ಕೆ ಕಾರಣವೇನು?**

ಎನ್‌ಇಪಿ 2020ರ ಪ್ರಮುಖ ಅಂಶಗಳನ್ನು, ಅದರಲ್ಲೂ ತ್ರಿಭಾಷಾ ಸೂತ್ರವನ್ನು ಜಾರಿಗೆ ತರುವುದಿಲ್ಲ ಎಂದು ತಮಿಳುನಾಡು ಸರ್ಕಾರ ಹೇಳುತ್ತಿದೆ. ಇದರಿಂದಾಗಿ ಕೇಂದ್ರ ಸರ್ಕಾರ ಸಮಗ್ರ ಶಿಕ್ಷಣ ಅಭಿಯಾನ ಯೋಜನೆಯ 573 ಕೋಟಿ ರೂ.ಗಳನ್ನು ತಡೆಹಿಡಿದಿದೆ. ಎನ್‌ಇಪಿ ಮಾರ್ಗಸೂಚಿಗಳನ್ನು ಜಾರಿಗೆ ತರುವ ರಾಜ್ಯಗಳಿಗೆ ಮಾತ್ರ ಈ ಅನುದಾನ ನೀಡಲಾಗುತ್ತದೆ.

## ಪ್ರೀತಿಗೆ ಡಾಕ್ಟರೇಟ್



ದಾವಣಗೆರೆ, ಮಾ. 12- ನಗರದ ಶ್ರೀಮತಿ ಪ್ರೀತಿ ಅವವರಿಗೆ ಶಿಕ್ಷಣ, ಆಡಳಿತ ಹಾಗೂ ಮಾರ್ಕೆಟಿಂಗ್ ಸಾಧನೆಯನ್ನು ಗುರುತಿಸಿ, ಅಮೆರಿಕದ ವಾಷಿಂಗ್ಟನ್ ಡಿಜಿಟಲ್ ಯೂನಿವರ್ಸಿಟಿಯು ಗೌರವ ಡಾಕ್ಟರೇಟ್ ನೀಡಿದೆ. ಅಲ್ಲದೇ, ಕೇಂದ್ರ ಸರ್ಕಾರದ ವೆಲ್ ರೆಡ್ ಫೌಂಡೇಷನ್ ವತಿಯಿಂದ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ನೇಷನ್ ಸ್ಟಾರ್ ಅವಾರ್ಡ್, ಬ್ಲೂ ಸ್ಟಾರ್ ಇವೆಂಟ್ಸ್ ಐಕಾನ್ ಆಫ್ ಇಂಡಿಯಾ-2025 ಪ್ರಶಸ್ತಿ, ಸೋಷಿಯಲಿ ಪಾಯಿಂಟ್ ಫೌಂಡೇಷನ್ ಪ್ರೈಡ್ ಆಫ್ ಇಂಡಿಯಾ-2025 ಪ್ರಶಸ್ತಿ ಹಾಗೂ ರಾಜಸ್ಥಾನ ರಾಜ್ಯದ ಕೋಟಾದ ಗ್ಯಾನ್ ಉದಯ್ ಫೌಂಡೇಷನ್ ಇಂಟರ್ ನ್ಯಾಷನಲ್ ಅಚೀವರ್ಸ್ ಅವಾರ್ಡ್ ನೀಡಿದೆ. ಪ್ರೀತಿ, ನಗರದ ಶ್ರೀಮತಿ ಸುಷ್ಮಾಸುಧೀರ್ ಪುತ್ರಿ.

# ಜಾತಿಯಿಂದ ವೀರಶೈವರಾಗದೇ ಆಚರಣೆಯಿಂದ ವೀರಶೈವರಾಗ ಬೇಕು

## ಜಗಳೂರಿನ ಕಾರ್ಯಕ್ರಮದಲ್ಲಿ ಉಜ್ಜಯಿನಿ ಜಗದ್ಗುರುಗಳ ಕರೆ

ಜಗಳೂರು, ಮಾ. 12- ಜಾತಿಯಿಂದ ವೀರಶೈವರಾಗದೇ ಬಸವಣ್ಣನ ತತ್ವಾದರ್ಶಗಳ ಆಚರಣೆಯಿಂದ ವೀರಶೈವರಾಗಬೇಕು ಎಂದು ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗ ರಾಜದೇಶಿ ಕೇಂದ್ರ ಶಿವಾಚಾರ್ಯ ಮಹಾಸ್ವಾಮೀಜಿ ಹೇಳಿದರು.

ಪಟ್ಟಣದಲ್ಲಿ ಇಂದು ವೀರಶೈವ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದ್ದ ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರ ಜಯಂತ್ಯೋತ್ಸವ ಹಾಗೂ ಪಂಚಾ ಚಾರ್ಯ ಯುಗಮಾನೋತ್ಸವ ಕಾರ್ಯಕ್ರಮ ಹಾಗೂ ಧರ್ಮಸಭೆಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಎಲ್ಲಾ ಜಾತಿಗಳ ಮರದ ಕಟ್ಟಿಗೆಗಳು ಅಗ್ನಿ ಸಂಸ್ಕಾರದ ನಂತರ ಭಸ್ಮಗೊಂಡು ಬೂದಿಯಾಗಿ ಪರಿವರ್ತನೆ ಗೊಳ್ಳುವಂತೆ, ಸಮಾಜದಲ್ಲಿ ಯಾವುದೇ ಜಾತಿಯವ ರಾಗಲೀ ಲಿಂಗಧಾರಣೆಯ ನಂತರ ಜಾತಿ, ಪಂಗಡಗಳು ವಿಲೀನಗೊಳ್ಳಬೇಕಿದೆ. ಒಳಪಂಗಡಗಳು ಕೇವಲ ಕಸುಬುಗಳಿಂದ ಹುಟ್ಟಿಕೊಂಡಿವೆ ಎಂದು ತಿಳಿಸಿದರು.

ಪರಮಾತ್ಮನಿಂದ ಸೃಷ್ಟಿಯಾದ ವೀರಶೈವ ಲಿಂಗಾಯತ ಧರ್ಮ ಪರಂಪರೆ ಸಾರ್ವಕಾಲಿಕವಾಗಿ ಸತ್ಯ. ಇತ್ತೀಚೆಗೆ ಆಯಾ ಸಮುದಾಯಗಳ ಉದ್ಧಾರಕ್ಕಾಗಿ, ರಾಜಕೀಯ ಲಾಭಕ್ಕಾಗಿ ಮತ ಮಾನ್ಯಗಳು ಸೃಷ್ಟಿಯಾಗಿವೆ .ಆದರೆ ಪೂರ್ವಜರ ಕಾಲಘಟ್ಟದಿಂದಲೂ ಒಬ್ಬ ಜಂಗಮರ ಹಿರೇಮಠಗಳನ್ನು ಹೊಂದಿದ್ದು, ಗುರು ಶಿಷ್ಯರ ಪರಂಪರೆಗಳಿದ್ದವು.

ಹಳ್ಳಿಗಳಲ್ಲಿ ಸರ್ವ ಜನಾಂಗದ ಸಾಮರಸ್ಯತೆ ಕಾಪಾಡುತ್ತಿದ್ದವು. ಅನೇಕ ಸಮಾಜಗಳಿಗೆ ಲಿಂಗಧಾರಣೆಗೊಳಿಸಿದ ಜಗದ್ಗುರು ರೇಣುಕಾಚಾರ್ಯರ ಸಾಮಾಜಿಕ ಕ್ರಾಂತಿಯ ಸಾಧನೆಗಳು ಇಂದಿಗೂ ಉಲ್ಲೇಖವಾಗಿವೆ. ನಂತರ ಅನೇಕ ಧರ್ಮಗಳು ಜನ್ಮತಾಳಿ, ಅವನತಿ ಹೊಂದಿವೆ ಆದರೆ ವೀರಶೈವ ಇಂದಿಗೂ ಜೀವಂತವಿದೆ ಎಂದರು.



ಗಡಿ ಗ್ರಾಮ ಉಜ್ಜಿನಿ ಸದ್ಧರ್ಮ ಪೀಠಕ್ಕೂ ಜಗಳೂರಿನ ಅಧಿಕ ಸಂಖ್ಯೆಯ ಭಕ್ತ ಸಮೂಹಕ್ಕೂ ಅವಿನಾಭಾವ ನಂಟಿದೆ. ಅದರಲ್ಲೂ ನಾಯಕ ಸಮುದಾಯದವರು ಪೀಠದ ಮುಂಚೂಣಿ ಸೈನಿಕರಿದ್ದಂತೆ. ಜಗಳೂರಿನಲ್ಲಿ ಮುಂಬರುವ ದಿನಗಳಲ್ಲಿ ಜಾತ್ಯತೀತ, ಲಿಂಗಾತೀತ, ವಯಸ್ಸಿನ ಅಂತರವಿಲ್ಲದೆ ಬಿಡುವಿನ ವೇಳೆ ಸಂಸ್ಕಾರ ಶಿಬಿರಗಳನ್ನು ಏರ್ಪಡಿಸಿದರೆ ನಾವೂ ಭಾಗವಹಿಸುತ್ತೇವೆ ಎಂದು ಸಲಹೆ ನೀಡಿದರು.

ರಾಜ್ಯದಲ್ಲಿ ವೀರಶೈವ ಸಮುದಾಯದವರು ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಒಗ್ಗಟ್ಟು ಪ್ರದರ್ಶಿಸಬೇಕು.

ಉಪ ಜಾತಿಗಳ ಬೀಜ ಬಿತ್ತಬಾರದು. ಗಳಿಸಿದ ಜ್ಞಾನದಿಂದ ಸಮಾಜಕ್ಕೆ ಒಳಿತು ಬಯಸಿ, ಮುಖ್ಯವಾಹಿನಿಗೆ ಬರಬೇಕಿದೆ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಜ್ಯ ಉಪಾಧ್ಯಕ್ಷ ಶ್ರೀನಿವಾಸ್ ಕರೆ ನೀಡಿದರು.

ಉಜ್ಜಿನಿ ಸದ್ಧರ್ಮ ಪೀಠ ಜಾತ್ಯತೀತವಾಗಿದೆ. ಉಜ್ಜಿನಿ ಶಿಖರಕ್ಕೆ ತೈಲ ಎರೆಯಲು ಕೂಡ್ಲಿಗಿ ತಾಲ್ಲೂಕಿನ ಜರ್ಮಲಿ ಗ್ರಾಮದ ಪಾಳೇಗಾರರು ಎಣ್ಣೆ ತರುವ ಸಂಪ್ರದಾಯ ಇಂದಿಗೂ ಜೀವಂತವಾಗಿದೆ. ರಾಜ್ಯದಲ್ಲಿ ಜಂಗಮ ಸಮುದಾಯದಲ್ಲಿ ಹಲವು ಶಾಸಕರುಗಳು ಆಯ್ಕೆಯಾಗಿ ರಾಜಕೀಯ ಸ್ಥಾನಮಾನಗಳಿಸಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದು ಮಾಜಿ ಶಾಸಕ ಎಚ್.ಪಿ. ರಾಜೇಶ್ ತಿಳಿಸಿದರು.

ಸ್ವಾಗತ ಸಮಿತಿ ಅಧ್ಯಕ್ಷ ಎನ್.ಎಂ.ಲೋಕೇಶ್, ಡಯಟ್ ನ ಹಿರಿಯ ಉಪನ್ಯಾಸಕ ಜಿ.ಎಂ.ದಾರುಕೇಶ್ ಉಪನ್ಯಾಸ ನೀಡಿದರು.

ಜಿ.ಪಂ. ಮಾಜಿ ಸದಸ್ಯ ಕೆ.ಪಿ.ಪಾಲಯ್ಯ, ಅಖಿಲ ಭಾರತ ವೀರಶೈವ ಮಹಾಸಭಾ ರಾಜ್ಯ ಕಾರ್ಯದರ್ಶಿ ಶಶಿಕಲಾ ಮೂರ್ತಿ ಮಾತನಾಡಿದರು.

ಈ ಸಂದರ್ಭದಲ್ಲಿ ಮುಸ್ಟೂರು ಮಠದ ಹುಚ್ಚನಾಗಲಿಂಗ ಸ್ವಾಮೀಜಿ, ಬೇಡ ಜಂಗಮ ಸಮಾಜದ ತಾಲ್ಲೂಕು ಅಧ್ಯಕ್ಷ ಶಿವಕುಮಾರಯ್ಯ, ಪ.ಪಂ. ಅಧ್ಯಕ್ಷ ನವೀನ್ ಕುಮಾರ್, ಪದಾಧಿಕಾರಿಗಳಾದ ಹಾಲಮೂರ್ತಿ, ಪಂಚಾಕ್ಷರಯ್ಯ, ನಂಜುಂಡಸ್ವಾಮಿ,ಕೆ.ಎಂ.ಜಗದೀಶ್, ಬಸವರಾಜಯ್ಯ, ರುದ್ರಯ್ಯ, ಡಾ.ರವಿಕುಮಾರ್, ಸಿಂಡಿಕೇಟ್ ಸದಸ್ಯ ಪ್ರಶಾಂತ್ ದುಗ್ಗತ್ತಿಮಠ್, ಎ.ಎಂ. ಮರುಳಾರಾಧ್ಯ, ಬ್ರಹ್ಮಾಕುಮಾರಿ ಈಶ್ವರೀಯ ವಿದ್ಯಾಲಯದ ಭಾರತಿ, ನಿವೃತ್ತ ಪ್ರಾಂಶುಪಾಲ ಮಲ್ಲಿಕಾರ್ಜುನ್ ಭಾಗವಹಿಸಿದ್ದರು.

## ದೊಡ್ಡಬಾತಿಯಲ್ಲಿ ಇಂದು ತೇರು

ದಾವಣಗೆರೆ ತಾಲ್ಲೂಕಿನ ದೊಡ್ಡಬಾತಿ ಗ್ರಾಮದ ಶ್ರೀ



ರೇವಣ ಸಿದ್ದೇಶ್ವರ ಸ್ವಾಮಿಯ ಮಹಾ ರಥೋತ್ಸವವು ಇಂದು ರಾತ್ರಿ 12 ಗಂಟೆ ನಂತರ ನಡೆಯಲಿದೆ.

ನಾಳೆ ಶುಕ್ರವಾರ ಓಕುಳಿ ಕಾರ್ಯ ನಡೆಯಲಿದೆ.

## ರಂಜಾನ್ ರೋಜಾ ಸಮಯ

ದಿನಾಂಕ - 13.03.2025
ಇಫ್ತಾರ್ - 6.41
ದಿನಾಂಕ - 14.03.2025
ಸಹೇರಿ - 5.16

## ಹೆತ್ತವರ ಆರೈಕೆ ಮಾಡದ ಮಕ್ಕಳಿಗೆ ಆಸ್ತಿ ದೊರೆಯದಂತೆ ವಿಲ್ ರದ್ದು

**(1ನೇ ಪುಟದಿಂದ)** ಹಿರಿಯ ನಾಗರಿಕರ ನಿರ್ವಹಣೆ ಮತ್ತು ಕಲ್ಯಾಣ ಕಾಯ್ದೆಯನ್ನು 2007 ರಲ್ಲೇ ಜಾರಿಗೆ ತರಲಾಗಿದೆ, ಈ ಮಾಹಿತಿಯನ್ನು ಪರಿಣಾಮಕಾರಿಯಾಗಿ ಎಲ್ಲರಿಗೂ ತಲುಪಿಸಬೇಕು ಎಂಬ ಉದ್ದೇಶದಿಂದಲೇ ಪರಿಷತ್‌ನಲ್ಲಿ ಕಾಯ್ದೆ ಬಗ್ಗೆ ಉಲ್ಲೇಖಿಸುತ್ತಿದ್ದೇನೆ ಎಂದು ಹೇಳಿದರು.

ಕಾಯ್ದೆಯ ಪ್ರಕಾರ ಮಕ್ಕಳು ಅಥವಾ ಸಂಬಂಧಿಕರು ಹಿರಿಯ ನಾಗರಿಕರ ಆರೈಕೆ ಮಾಡಬೇಕು. ಔಷಧಿ ಸೇರಿದಂತೆ ಮಾಸಿಕ ಖರ್ಚಿಗೆ ಹಣ ನೀಡಬೇಕು. ತಪ್ಪಿದರೆ ಕಾಯ್ದೆಯ ವಿಧಿ-9ರಡಿ ಸಂಬಂಧಪಟ್ಟ ಅಧಿಕಾರಿಗಳ ಬಳಿ ದೂರು ಸಲ್ಲಿಸಬಹುದಾಗಿದೆ ಎಂದು ಸಚಿವರು ತಿಳಿಸಿದರು.

ದೂರು ಸಾಬೀತಾದರೆ, ಸೆಕ್ಷನ್ 23ರನ್ವಯ ಪೋಷಕರು ತಮ್ಮ ಮಕ್ಕಳ ಅಥವಾ ಸಂಬಂಧಿಕರ ಹೆಸರಿನಲ್ಲಿ ಬರೆದಿರುವ ವಿಲ್ ಅಥವಾ ದಾನಪತ್ರ ರದ್ದುಗೊಳಿಸಿ ಮತ್ತೆ ಪೋಷಕರ ಹೆಸರಿಗೇ ಮರುಸ್ಥಾಪಿಸಲು ಕಾನೂನಿನಲ್ಲಿ ಅವಕಾಶವಿದೆ.

ಈ ಜವಾಬ್ದಾರಿಯನ್ನು ಉಪವಿಭಾಗಾಧಿಕಾರಿಗಳಿಗೆ ನೀಡಲಾಗಿದ್ದು, ಈಗಾಗಲೇ ಸಾವಿರಾರು ಪ್ರಕರಣಗಳು ಇತ್ಯರ್ಥಕ್ಕೆ ಬಾಕಿ ಇವೆ. ಪ್ರತಿ ತಿಂಗಳೂ ಉಪವಿಭಾಗಾಧಿಕಾರಿಗಳ ಜೊತೆ ಮಾಸಿಕ ಸಭೆ ನಡೆಸಲಾಗುತ್ತಿದೆ. ಅಲ್ಲದೆ, ಜಿಲ್ಲಾಧಿಕಾರಿಗಳಿಗೆ ಮೇಲ್ಮನವಿ ಸಲ್ಲಿಸಲೂ ಅರ್ಜಿದಾರರಿಗೆ ಅವಕಾಶ ನೀಡಲಾಗಿದೆ ಎಂದರು.


ವೈಭವ್ ಜ್ಯೂಯಲರಿಸ್ ಮಾಲೀಕರಾದ

**ಶ್ರೀ ನಾಗರಾಜ ಹೆಚ್.ಆರ್. ಶ್ರೇಷ್ಠಿ ನಿಧನ**



ದಾವಣಗೆರೆ ಸಿಟಿ ಡಿ.ಸಿ.ಎಂ. ಬಡಾವಣೆ ವಾಸಿ

**ಶ್ರೀ ನಾಗರಾಜ ಶ್ರೇಷ್ಠಿ ಹೆಚ್.ಆರ್.**

ಇವರು ದಿನಾಂಕ : 12.03.2025ರ ಬುಧವಾರ ಮಧ್ಯಾಹ್ನ 2.00 ಗಂಟೆಗೆ ನಿಧನರಾದರು. ಮೃತರಿಗೆ 75 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, 3 ಜನ ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು **ದಿನಾಂಕ : 13.03.2025 ಬೆಳಗ್ಗೆ 11ಕ್ಕೆ ಪಿ.ಬಿ. ರೋಡ್‌ನಲ್ಲಿರುವ ವೈಕುಂಠಧಾಮದಲ್ಲಿ ನೆರವೇರಿಸಲಾಗುವುದು.**

**ಇಂತಿ ದುಃಖತಪ್ತ ಕುಟುಂಬ ವರ್ಗ**

**ಫೋನ್ : 97386 73558, 63639 52659**


# ಗ್ಯಾರಂಟಿ ಸಮಿತಿ ವಿರುದ್ಧ ದೂರು

**(1ನೇ ಪುಟದಿಂದ)** ಆರೋಪಿಸಿದರು. ವಿಧಾನಮಂಡಲದ ಒಳಗೆ ವಿಷಯ ಪ್ರಸ್ತಾಪ ಮಾಡಿದರೂ ಬೆಲೆ ನೀಡದ ಸರ್ಕಾರ ತನ್ನ ನಿಲುವಿಗೆ ಅಂಟಿಕೊಂಡಿದ್ದು, ತಾವು ಮಧ್ಯೆಪ್ರವೇಶಿಸಿ ಇದನ್ನು ತಡೆಯಬೇಕೆಂದು ರಾಜ್ಯಪಾಲರನ್ನು ಕೋರಿದ್ದಾರೆ. ವಿಧಾನಮಂಡಲದ ಪ್ರತಿಪಕ್ಷ ನಾಯಕರಾದ ಆರ್.ಅಶೋಕ್, ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ರಾಜ್ಯಾಧ್ಯಕ್ಷ ಹಾಗೂ ಶಾಸಕ ಬಿ.ವೈ. ವಿಜಯೇಂದ್ರ, ಜೆಡಿಎಸ್‌ನ ಸಿ.ಆರ್. ಸುರೇಶ್‌ಬಾಬು ಹಾಗೂ ಎಸ್.ಎಲ್. ಭೋಜೇಗೌಡ ಅವರ ನಾಯಕತ್ವದಲ್ಲಿ ಉಭಯ ಸದನಗಳ ಸದಸ್ಯರು ವಿಧಾನಸೌಧದಿಂದ ರಾಜಭವನಕ್ಕೆ ಕಾಲ್ನಡಿಗೆಯಲ್ಲಿ ತೆರಳಿ ಮನವಿ ಪತ್ರ ಸಲ್ಲಿಸಿದರು.

ರಾಜ್ಯಪಾಲರ ಭೇಟಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ವಿಜಯೇಂದ್ರ ಹಾಗೂ ಆರ್.ಅಶೋಕ್, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರಿಂದ ಶಾಸಕರ ಹಕ್ಕು ಮೊಟಕುಗೊಳಿಸುವ ಕಾರ್ಯ ನಡೆದಿದೆ ಎಂದು ಆರೋಪಿಸಿದರು.

ಗ್ಯಾರಂಟಿ ಅನುಷ್ಠಾನದಲ್ಲಿ ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯಮಟ್ಟದ ಅಧ್ಯಕ್ಷರನ್ನು ನೇಮಿಸುವ ಮೂಲಕ ಕಾಂಗ್ರೆಸ್ ಸರ್ಕಾರ ಅಸಂವಿಧಾನಿಕ ನಡೆ ಇಡುತ್ತಿದೆ ಎಂಬುದನ್ನು ರಾಜ್ಯಪಾಲರ ಗಮನಕ್ಕೆ ತಂದಿದ್ದೇವೆ.

ಜನರು ಬೆವರು ಸುರಿಸಿ ದುಡಿದು ಕಟ್ಟಿದ ತೆರಿಗೆ ಹಣವನ್ನು ಸರ್ಕಾರ ದುರುಪಯೋಗ ಮಾಡುತ್ತಿದೆ. ನಮ್ಮ ಕ್ಷೇತ್ರಗಳಲ್ಲೇ ಸೋತಿರುವ ಕಾಂಗ್ರೆಸ್ ಅಭ್ಯರ್ಥಿಗಳ ಶಿಫಾರಸ್ಸಿನ ಮೇರೆಗೆ ವಿವಿಧ ಸಮಿತಿಗಳನ್ನು ನೇಮಕ ಮಾಡುತ್ತಿದ್ದಾರೆ.

ಪ್ರತಿಪಕ್ಷಗಳ ಶಾಸಕರ ಹಕ್ಕನ್ನು ಮೊಟಕುಗೊಳಿಸುವ ಕೆಲಸ ಸಿದ್ದರಾಮಯ್ಯ ಮಾಡುತ್ತಿದ್ದಾರೆ, ಸದನದಲ್ಲಿ ಅವರ ವಿರುದ್ಧ ಹಕ್ಕುಚ್ಯುತಿ ಮಂಡಿಸಲಾಗುವುದು ಎಂದರು. ಇದಕ್ಕೂ ಮುನ್ನ, ವಿಧಾನ ಸೌಧದ ಮುಂಭಾಗ ಕೆಂಗಲ್ ಹನುಮಂತಯ್ಯ ಪ್ರತಿಮೆ ಬಳಿ ಉಭಯ ಪಕ್ಷಗಳ ಸದಸ್ಯರು ಧರಣಿ ನಡೆಸಿ, ಪ್ರತಿಭಟಿಸಿ, ನಂತರ ರಾಜಭವನಕ್ಕೆ ತೆರಳಿದರು.

## ಹರಿಹರ : ರಸ್ತೆ ಬದಿಯ ಅಂಗಡಿಗಳ ತೆರವು



ಹರಿಹರ, ಮಾ. 12 - ನಗರದ ರೈಲ್ವೆ ನಿಲ್ದಾಣ ಮುಂಭಾಗದಿಂದ ಪಿ.ಬಿ. ರಸ್ತೆಗೆ ಹೋಗುವ ರಸ್ತೆ ಮಾರ್ಗದಲ್ಲಿ, ರಸ್ತೆಯನ್ನು ಒತ್ತುವರಿ ಮಾಡಿಕೊಂಡು ವ್ಯಾಪಾರ ವಹಿವಾಟು ಮಾಡುತ್ತಿದ್ದ, ಅಂಗಡಿಗಳನ್ನು ನಗರ ಸಭೆಯ ವತಿಯಿಂದ ಜೆಸಿಬಿ ಯಂತ್ರಗಳೊಂದಿಗೆ ತೆರವು ಗೊಳಿಸಲಾಯಿತು. ಈ ಸಂದರ್ಭದಲ್ಲಿ ನಗರಸಭೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಹಾಜರಿದ್ದರು.

## ಗೌರವ ಧನ ಹೆಚ್ಚಳ ಸ್ವಾಗತಾರ್ಹ



ದಾವಣಗೆರೆ, ಮಾ. 12- ಸಿಎಂ ಸಿದ್ದರಾಮಯ್ಯನವರು ಮಂಡಿಸಿದ 2025 - 26ರ ಆಯವ್ಯಯದಲ್ಲಿ ಬಿಸಿಯೂಟ ಕಾರ್ಯಕರ್ತೆಯರ ಗೌರವ ಧನವನ್ನು 1 ಸಾವಿರಕ್ಕೆ ಹೆಚ್ಚಳ ಮಾಡಿರುವುದು ಸ್ವಾಗತಾರ್ಹ ಎಂದು ಸರ್ಕಾರಿ ನೌಕರರ ಸಂಘದ ನಿಕಟಪೂರ್ವ ಜಿಲ್ಲಾಧ್ಯಕ್ಷ ಎಸ್. ಹಾಲೇಶಪ್ಪ ತಿಳಿಸಿದ್ದಾರೆ.

## ರಾಜಿ ಸಂಧಾನದಿಂದ ನೆಮ್ಮದಿಯ ಜೀವನ



### ಜಗಳೂರಿನ ಕಾರ್ಯಕ್ರಮದಲ್ಲಿ ನ್ಯಾಯಾಧೀಶರಾದ ಆರ್.ಎನ್. ಪ್ರವೀಣ್ ಕುಮಾರ್ ಅಭಿಮತ

ಜಗಳೂರು, ಮಾ. 12 - ರಾಜೀ ಸಂಧಾನದಿಂದ ಪ್ರತಿಯೊಬ್ಬರೂ ನೆಮ್ಮದಿಯ ಜೀವನ ಸಾಗಿಸಬಹುದು ಎಂದು 2ನೇ ಹೆಚ್ಚುವರಿ ಜಿಲ್ಲಾ ಸೆಷನ್ಸ್ ಕೋರ್ಟ್ ನ್ಯಾಯಾಧೀಶರಾದ ಆರ್.ಎನ್. ಪ್ರವೀಣ್ ಕುಮಾರ್ ಅಭಿಪ್ರಾಯಪಟ್ಟರು.

ಪಟ್ಟಣದ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಗುರುವಾರ ನಡೆದ ಲೋಕ ಅದಾಲತ್ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಜಗಳೂರಿನಂತಹ ಹಿಂದುಳಿದ ಪ್ರದೇಶದಲ್ಲಿ ಅದಾಲತ್ ಕಾರ್ಯಕ್ರಮಗಳಿಗೆ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ. ಸಿವಿಲ್ ಹಾಗೂ ಕೌಟುಂಬಿಕ ಪ್ರಕರಣಗಳಲ್ಲಿ ವರ್ಷಗಟ್ಟಲೆ ನ್ಯಾಯಾಲಯಕ್ಕೆ ಅಲೆದಾಡುವುದರಿಂದ ಅಮೂಲ್ಯವಾದ ಸಮಯ ಮತ್ತು ಹಣ ವ್ಯಯವಾಗಿ ಕಕ್ಷಿದಾರರು ಸಂಕಷ್ಟಕ್ಕೆ ಸಿಲುಕು ತ್ತಿದ್ದಾರೆ. ಅಹಂ ಮತ್ತು ಪ್ರತಿಷ್ಠೆಯಿಂದ ಜೀವನ ಸಮಸ್ಯೆಗಳಿಗೆ ಸಿಲುಕುತ್ತದೆ ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ. ಕರೆಣ್ಣವರ ಹೇಳಿದರು.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರಾದ ಎಚ್.ಕೆ. ರೇಷ್ಮಾ, ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶ ಆರ್. ಚೇತನ್, ವಕೀಲರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಮರೇನಹಳ್ಳಿ ಬಸವರಾಜ್, ಕಾರ್ಯದರ್ಶಿ ಎ.ಕೆ. ಪರಶುರಾಮ್ ಇದ್ದರು.

## ನಗರದಲ್ಲಿ ಇಂದು ಮಜ್ಜಿಗೆ ವಿತರಣೆ

ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ನಡೆಸುತ್ತಿರುವ ಮಜ್ಜಿಗೆ ವಿತರಣಾ ಕಾರ್ಯಕ್ರಮಕ್ಕೆ ಶ್ರೀಮತಿ ಉಷಾ ಕುಲ್ಕರ್ಣಿ ಇವರು ಇಂದಿನ ದಾನಿಗಳಾಗಿದ್ದಾರೆ. ಈ ಸತ್ಕಾರ್ಯಕ್ಕೆ ದಾನ ಮಾಡಲು ಬಯಸುವವರು 9110455199 ಈ ಸಂಖ್ಯೆಗೆ ಸಂಪರ್ಕಿಸಬಹುದು.

# ರೇಣುಕಾಚಾರ್ಯರ ಧಾರ್ಮಿಕ ಚಿಂತನೆಗಳು ಸರ್ವಧರ್ಮೀಯರಿಗೂ ಮಾದರಿ

## ಹರಪನಹಳ್ಳಿ ಕಾರ್ಯಕ್ರಮದಲ್ಲಿ ತೆಗ್ಗಿನಮಠ ಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ವರ ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ

ಹರಪನಹಳ್ಳಿ, ಮಾ. 12 - ರೇಣುಕಾ ಚಾರ್ಯರು ಮಾನವ ಕಲ್ಯಾಣಕ್ಕೆ ಶ್ರಮಿಸಿ ದ್ದರು. ಅವರ ಧಾರ್ಮಿಕ ಚಿಂತನೆಗಳು ಸರ್ವಧರ್ಮೀಯರಿಗೂ ಮಾದರಿಯಾಗಿವೆ ಎಂದು ತೆಗ್ಗಿನಮಠ ಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ವರ ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಪಟ್ಟಣದ ತಾಲ್ಲೂಕು ಪಂಚಾಯ್ತಿಯ ಸಾಮರ್ಥ್ಯ ಸೌಧದಲ್ಲಿ ಜರುಗಿದ ಆದಿ ಜಗದ್ಗುರು ರೇಣುಕಾಚಾರ್ಯ ಹಾಗೂ ನಾರಾಯಣ ಯತೀಂದ್ರರವರ ಜಯಂತ್ಯೋತ್ಸವದ ಸಾನಿಧ್ಯ ವಹಿಸಿ ಮಾತನಾಡಿದರು.

ರೇಣುಕಾಚಾರ್ಯರು ಧರ್ಮ ಸಹಿಷ್ಣುತೆ, ಮತ ಸಹಿಷ್ಣುತೆ ಯಾರು ತಾಳುತ್ತಿಲ್ಲ. ದೇಶದಲ್ಲಿನ ಪ್ರಜೆಗಳು ಅಸೂಯೆಯ ಮುನ್ನುಡಿಗೆ ನಾಂದಿ ಯಾಡುತ್ತಿದ್ದೇವೆ, ಜಾತಿ-ಮತಗಳಲ್ಲಿ ಭಿನ್ನತೆ ಕಾಣುತ್ತಿದ್ದೇವೆ. ಅಖಂಡ ಮನುಕುಲ ಕರುಣೆಯಲ್ಲಿ ತೇಲಲು ಕಾರಣೀಭೂತರಾಗಿದ್ದಾರೆ, ಸ್ತ್ರೀಯರ ಮೇಲೆ ವಿಶೇಷ ಒಲವನ್ನು ಹೊಂದಿ ಸಾಮಾಜಿಕ ನ್ಯಾಯವನ್ನು ಒದಗಿಸಿದವರು. ವೀರಶೈವ ಸಮಾಜಕ್ಕೆ ಮದುವೆ ಆಚಾರ ವಿಚಾರ, ಸಂಸ್ಕಾರವನ್ನು ಬಳುವಳಿಯಾಗಿ ನೀಡಿದವರು ಎಂದರು.



ದೇವರ ಆರಾಧನೆಗೆ ಸಮಾನ ಅವಕಾಶ ಕಲ್ಪಿಸಿಕೊಟ್ಟರು, ಅಂತಹವರ ಸಾಧನೆಗಳನ್ನು ಸ್ಮರಿಸುತ್ತಾ ಅವರ ಆದರ್ಶಗಳನ್ನು ಭವಿಷ್ಯದ ಪೀಳಿಗೆಗೆ ರೂಪಿಸುವ ಕೆಲಸವಾಗ ಬೇಕಿದೆ ಎಂದರು.

ನಿವೃತ್ತ ಉಪನ್ಯಾಸಕ ಎಂ ಪಿ ಎಂ ಶಾಂತವೀರಯ್ಯ ಮಾತನಾಡಿ,ಇಂದಿನ ಯುವ ಪೀಳಿಗೆಯಲ್ಲಿ ಸಂಸ್ಕಾರದ ಕೊರತೆ ಕಾಣುತ್ತಿರುವುದು ಬೇಸರದ ಸಂಗತಿ, ಎಷ್ಟೇ ಉನ್ನತ ವ್ಯಾಸಂಗ ಪಡೆದರೂ ನಮ್ಮ ಸನಾತನ ಧರ್ಮದ ಸಂಸ್ಕೃತಿ, ಸಂಸ್ಕಾರದ ಬಗ್ಗೆ ಬಿಡುವಿನ ವೇಳೆಯಲ್ಲಿ ತಿಳಿಸಬೇಕು. ಯುಗಗಳು ಬದಲಾದಂತೆ ಆಯಾ ಕಾಲಘಟ್ಟದಲ್ಲಿ ಧರ್ಮ ರಕ್ಷಣೆಗಾಗಿ ಯುಗ ಪುರುಷರು ಜನಿಸಿದ್ದಾರೆ, ವಿಶ್ವವೇ ಒಂದು ಕುಟುಂಬವಾಗಿದೆ ಎಂದು ಸಾರಿದವರು ರೇಣುಕಾಚಾರ್ಯರು, ವಿಧಿ ಲಿಖಿತ ಬದಲಾಯಿಸುವ ಶಕ್ತಿ ಗುರುವಿನಲ್ಲಿ ಇರುತ್ತದೆ. ಹಾಗಾಗಿ ಗುರು ಎಂದಿಗೂ ದೊಡ್ಡವನಾಗಿದ್ದಾನೆ ಎಂದರು.

ಬೇಡ ಜಂಗಮ ಸಮಾಜದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಸ್ವಾಮಿ ಕಲ್ಮಠ ಮಾತನಾಡಿ, ಜಗದ್ಗುರು ರೇಣುಕಾಚಾರ್ಯರು ವೀರಶೈವ ಧರ್ಮದ ಮಹಾನ್ ಶರಣ ಮತ್ತು ಗುರುಗಳಲ್ಲಿ ಒಬ್ಬರು. ಇವರ ತತ್ವ, ಬದುಕಿನ ಚರಿತ್ರೆ, ಧಾರ್ಮಿಕ ಸಾಧನೆಗಳು ಭಾರತೀಯ ಸಾಮಾಜಿಕ ಮತ್ತು ಧಾರ್ಮಿಕ ಚರಿತ್ರೆಯಲ್ಲಿ ಮಹತ್ವಪೂರ್ಣ ಸ್ಥಾನವನ್ನು ಪಡೆದಿವೆ. ಕನ್ನಡ ಭಾಷೆಯಲ್ಲಿ ಇವರ ಬದುಕು ಮತ್ತು ತತ್ವಗಳನ್ನು ವಿವರಿಸುವ ಹಲವು ಪುರಾಣಗಳು ಮತ್ತು ಗ್ರಂಥಗಳಿವೆ ಎಂದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲ್ಲೂಕು ಅಧ್ಯಕ್ಷ ಎಂ ರಾಜಶೇಖರ ಮಾತನಾಡಿದರು.

ಈ ವೇಳೆ ತೆಗ್ಗಿನ ಮಠದ ಕಾರ್ಯದರ್ಶಿ ಟಿ.ಎಂ. ಚಂದ್ರಶೇಖರಯ್ಯ, ಬೇಡ ಜಂಗಮ ಸಮಾಜದ ತಾಲ್ಲೂಕು ಅಧ್ಯಕ್ಷ ಕೆ.ಎಂ.ಶಿವಕುಮಾರಸ್ವಾಮಿ, ತಹಶೀಲ್ದಾರ್ ಬಿ.ವಿ. ಗಿರೀಶ್ ಬಾಬು, ಮುಖಂಡರಾದ ಟಿ. ಎಚ್. ಎಂ. ಮಲ್ಲಿಕಾರ್ಜುನಯ್ಯ, ಡಾ.ಎ.ಎಂ.ರೇಣುಕಾರಾಧ್ಯ, ಶಿವಾನಂದ ಸ್ವಾಮಿ ಟಿ.ಎಚ್. ಎಂ, ಸಿ. ಎಂ. ಕೊಟ್ರಯ್ಯ, ಎಚ್. ಎಂ. ಜಗದೀಶ, ಎ. ಎಂ. ಗುರುಪ್ರಸಾದ, ಎನ್.ಜಿ. ಮನೋಹರ್, ಗೊಂಗಡಿ ನಾಗರಾಜ, ಪಟೇಲ್ ಬೆಟ್ಟನಗೌಡ, ಲತಾ ಟಿ.ಎಚ್.ಎಂ., ಬಲಿಜ ಸಮಾಜ ಮುಖಂಡರು ಸೇರಿದಂತೆ ಇತರರು ಇದ್ದರು.


ವಾರ್ತಾ ಮತ್ತು ಸಾರ್ವಜನಿಕ
ಸಂಪರ್ಕ ಇಲಾಖೆ
ಗೃಹ ಜ್ಯೋತಿ
ಪ್ರತಿ ಮನೆಗೆ
200 ಯೂನಿಟ್‌ವರೆಗೆ ವಿದ್ಯುತ್ ಉಚಿತ
ಫಲಾನುಭವಿಗಳು
1.63 ಕೋಟಿ
ಒಟ್ಟು ವೆಚ್ಚ
13,373 ಕೋಟಿ ರೂ.
ಉಚಿತ ವಿದ್ಯುತ್ ನಿಂದ ನಮ್ಮ ಮನೆ ಬೆಳಗುತ್ತಿದೆ.
ಉಳಿತಾಯವಾಗುವ ಕರೆಂಟ್ ಬಿಲ್ ಹಣದಿಂದ
ಮಾತ್ರೆ ಖರೀದಿಸುತ್ತಿದ್ದೇನೆ.
ಬಸವೇಗೌಡ
ಫಲಾನುಭವಿ
ಇದಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ
ಅವರಿಗೆ ಧನ್ಯವಾದ.
ನಮ್ಮ ಕರ್ನಾಟಕ
ಗ್ಯಾರಂಟಿ ಕರ್ನಾಟಕ
ಶಕ್ತಿ
ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಅನ್ನಭಾಗ್ಯ
ಬಡವರಿಗೆ ಪ್ರತಿ ತಿಂಗಳು 10 kg ಆಹಾರಧಾನ್ಯ
ಗೃಹ ಜ್ಯೋತಿ
ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ
ಗೃಹಲಕ್ಷ್ಮಿ
ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ₹2000
ಯುವನಿಧಿ
ಪ್ರತಿ ತಿಂಗಳು ನಿರುದ್ಯೋಗ ಭತ್ಯೆ
₹3000 ಪದವೀಧರರಿಗೆ | ₹1500 ಡಿಪ್ಲೊಮಾ ಪದವೀಧರರಿಗೆ
"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"
CMofKarnataka https://dipr.karnataka.gov.in/
ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗ ಮಾಲೀಕತ್ವ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು
ಕರ್ನಾಟಕ ವಾರ್ತೆ

‘ದಾವಣಗೆರೆ ಹಳೆ ಊರಿನ ಕಾಮದಹನ, ಹೋಳಿ ಸ್ವಾರಸ್ಯಗಳು’

# ಜನಪದೀಯ ನೃತ್ಯ ಹಾಗೂ ಕನ್ನಡಿಯ ಸತ್ಯ?

ಹೋಳಿ ಹುಣ್ಣಿಮೆ ಸಮೀಪಿಸುವಾಗ ಲಂಬಾಣಿ ಜನಾಂಗದ ಮಾತೆಯರು ಸಹೋದರಿಯರು ತಮ್ಮ ಸಾಂಪ್ರದಾಯಿಕ ಉಡುಗೆಯೊಂದಿಗೆ ತಾಂಡಾಗಳಿಂದ ಸಮೀಪದ ಪಟ್ಟಣಗಳಿಗೆ ತಂಡ ತಂಡವಾಗಿ ಬಂದು ಹಾಡು ಹೇಳುತ್ತಾ ಕೋಲು ಹುಯ್ಯುತ್ತಾ ನೃತ್ಯ ಮಾಡುತ್ತಾ ಇನಾಮು ರೂಪದಲ್ಲಿ ಹಬ್ಬಕ್ಕಾಗಿ ಹಣ ಪಡೆದುಕೊಂಡು ಹೋಗುವುದು ಪರಂಪರೆಯಿಂದ ನಡೆದುಕೊಂಡ ಬಂದ ಒಳ್ಳೆಯ ಸಂಪ್ರದಾಯವಾಗಿದೆ.



ನಮ್ಮ ಬಾಲ್ಯದಲ್ಲಿ ಚೌಕಿಪೇಟೆಗೆ ಹೀಗೆ ಹೆಚ್ಚಾಗಿ ಬರುತ್ತಿದ್ದರು. ಕಾರಣ ಲಂಬಾಣಿ ಅಂದರೆ, ಬಂಜಾರ ಜನಾಂಗದವರ ಉಡುಗೆಗಳಿಗೆ ಬೇಕಾದ ವಸ್ತ್ರ ಹಾಗೂ ವಸ್ತುಗಳನ್ನು ಮಾರಾಟ ಮಾಡುವ ಕೆಲ ಅಂಗಡಿಗಳು ಚೌಕಿಪೇಟೆಯಲ್ಲಿ ಮಾತ್ರ ಇದ್ದವು. ಆ ಪೈಕಿ ಶಂಕರ್ ಲಾಲ್, ಜಗತ್ ಪಾಲ್ ಅವರ ಅಂಗಡಿ, ಹನ್ಸಾಜಿ ರವರ ಅಂಗಡಿ, ನಾಗೋಸಾ ಲದ್ವಾವರವರ ಅಂಗಡಿ, ಸ್ವಲ್ಪಮಟ್ಟಿಗೆ ಪ್ರೇಮ್ ರಾಜ್ ಅಶೋಕ್ ಕುಮಾರ್ ಅವರ ಅಂಗಡಿ, ಬೇವಿನಮರದ ಕೆಳಗಿನ ಅಂಗಡಿ. ಹೀಗೆ ಕೆಲವೇ ಅಂಗಡಿಗಳಲ್ಲಿ ಮಾತ್ರ ಲಂಬಾಣಿಯವರ ಉಡುಗೆಗೆ ಮುಖ್ಯವಾಗಿ ಬೇಕಾದ ಕೆಂಪು ಬಣ್ಣದ ಬಟ್ಟೆ, ಕಪ್ಪು ಬಣ್ಣದ ಬಟ್ಟೆ ಹಾಗೂ ಕುಸುರಿ ಕೆಲಸಕ್ಕೆ ಬೇಕಾದ ತೆಳು ಗಾಜಿನ ಕನ್ನಡಿ ಚೂರುಗಳು, ತಗಡಿನ ಗುಂಡಿಗಳು, ಕಸೂತಿಗಾಗಿ ಬಳಸುವ ಸೂಜಿ ಮತ್ತು ದಾರಗಳು ಇವೆಲ್ಲಾ ಈ ಅಂಗಡಿಗಳಲ್ಲಿ ಮಾತ್ರ ಲಭ್ಯವಿತ್ತು. ಚಿತ್ರದುರ್ಗ ಜಿಲ್ಲೆ ಅಷ್ಟೇ ಅಲ್ಲದೆ ಬಳ್ಳಾರಿ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಿಂದಲೂ ಬಂಜಾರ ಜನಾಂಗದವರು ಈ ಅಂಗಡಿಗಳಿಗೆ ಬರುತ್ತಿದ್ದರು.

ಮಬ್ಬು ಬಿಳಿಯ ಪರ್ಕಾಳಿ ಬಟ್ಟೆ ಅಂದರೆ ಗ್ರೇ ಕ್ಲಾತ್‌ಗೆ ಈ ಕಪ್ಪು ಹಾಗೂ ಕೆಂಪು ಬಣ್ಣ ಹಾಕುವ ಕಾರ್ಯವನ್ನು ದೇವಾಂಗಪೇಟೆಯ ತಾಳದ ಚೆನ್ನವೀರಪ್ಪನವರು, ಹಗೆವುದಿಬ್ಬ ಮಲ್ಲಿಕಾರ್ಜುನ ದೇವಸ್ಥಾನ ಸಮೀಪದ ಶ್ರೀನಿವಾಸ್ ಹಾಗೂ ಕಾಳಿಕಾದೇವಿ ರಸ್ತೆಯ ರಾಮಲಿಂಗೇಶ್ವರ ಸೊಸೈಟಿಯವರು ಮುಂತಾದವರು ಮಾಡಿಕೊಡುತ್ತಿದ್ದರು.


ಈ ಬಟ್ಟೆಗಳಿಂದ ಲಂಗ ಕುಪ್ಪಸ ಹಾಗೂ ಮೇಲು ಮುಸುಕುಗಳನ್ನು ನಾಗೋಸಾ ಅಂಗಡಿಯ ಟೈಲರ್ ಷಣ್ಮುಖಪ್ಪ (ಇವರು ಮುಂದೆ ರಿಯಲ್ ಎಸ್ಟೇಟ್‌ನಲ್ಲಿ ತೊಡಗಿಕೊಂಡು ಚೆನ್ನಾಗಿ ಗಳಿಸಿದರು), ಹಂಸಾಜಿ ಅಂಗಡಿಯ ಟೈಲರ್ ಸಂಜೀವಪ್ಪ (ಇವರು ಶಾಮನೂರು ಶ್ರೀನಿವಾಸ ಶೆಟ್ಟರ ಲಕ್ಷ್ಮೀನಾರಾಯಣ ಶೆಟ್ಟರ ಶ್ರೀ ಚೌಡಾಂಬಿಕಾ ದೇವಸ್ಥಾನದ ಅರ್ಚಕರೂ ಆಗಿದ್ದರು), ಚಿಗಟೇರಿ ರಾಚಪ್ಪರ ಅಂಗಡಿಯ ಟೈಲರ್ ಚನ್ನವೀರಪ್ಪನವರು (ಇವರು ಪಟ್ಟೇದ ಚನ್ನಬಸಪ್ಪನವರ ಅಳಿಯಂದಿರು) ಮುಂತಾದ ದರ್ಜಿಗಳು ಹೊಲಿದು ಕೊಡುತ್ತಿದ್ದರು. ಇದರ ಅಲಂಕಾರಕ್ಕೆ ಬೇಕಾದ ತೆಳು ಗಾಜಿನ ಕನ್ನಡಿ ಚೂರುಗಳನ್ನು, ತಗಡಿನ ಗುಂಡಿಗಳನ್ನು ತಗಡಿನ ಡಬ್ಬಗಳಲ್ಲಿ ಇಟ್ಟು ಮಾರಲಾಗುತ್ತಿತ್ತು. ಬಟ್ಟೆ ಕೊಂಡುಕೊಂಡು ಅಲ್ಲೇ ಕುಳಿತು ಹೊಲಿಸಿಕೊಂಡ ಲಂಬಾಣಿ ಮಹಿಳೆಯರು ಆ ಕನ್ನಡಿಯ ಚೂರುಗಳನ್ನು ಕಲ್ಲಿನಿಂದ ಜಜ್ಜಿ ಬೇಕಾದ ಆಕಾರಕ್ಕೆ ಮಾಡಿಕೊಂಡು ಸೂಜಿ - ದಾರಗಳಿಂದ ಕಸೂತಿ ಮೂಲಕ ತಮ್ಮ ಉಡುಗೆಗಳನ್ನು ಅಲಂಕರಿಸಿಕೊಳ್ಳುವ ಕಸೂತಿಯನ್ನು ಸಹಾ ಅಲ್ಲೇ ಆರಂಭಿಸುತ್ತಿದ್ದರು.

ಕನ್ನಡಿಯ ಚೂರುಗಳು ಹಾಗೂ ತಗಡಿನ ಗುಂಡಿಗಳೊಂದಿಗೆ ಎರಡು ಪೈಸೆಯ, ಒಂದಾಣೆಯ, ನಾಲ್ಕಾಣೆಯ ನಾಣ್ಯಗಳನ್ನು ಸಹಾ ಉಡುಗೆಯ ಕಸೂತಿ ಅಲಂಕಾರಗಳಲ್ಲಿ ಬಳಸಿಕೊಳ್ಳುತ್ತಿದ್ದರು. ಇದನ್ನೆಲ್ಲಾ ನಮ್ಮ ಬಾಲ್ಯದಲ್ಲಿ ನೋಡುವುದೇ ನಮಗೆ ಖುಷಿ ಕೊಡುತ್ತಿತ್ತು. ಇಂತಹ ಉಡುಗೆ ತೊಟ್ಟ ಲಂಬಾಣಿ ಮಹಿಳೆಯರು ಹೋಳಿಯ ಮುನ್ನಾ ದಿನಗಳಲ್ಲಿ ತಂಡ ತಂಡವಾಗಿ ಬಂದು ಅಂಗಡಿಗಳ ಮುಂದೆ ಮನೆಗಳ ಮುಂದೆ ತಮ್ಮದೇ ಭಾಷೆಯ ಹಾಡುಗಳನ್ನು ಹೇಳುತ್ತಾ ವರ್ತುಲಾಕಾರದಲ್ಲಿ ಸುತ್ತುತ್ತಾ ಎಡಗೈಯನ್ನು ಮುಷ್ಟಿ ಮಾಡಿಕೊಂಡು ಎಲ್ಲರೂ ಒಮ್ಮೆ ಬಗ್ಗಿ ನೆಲದ ಕಡೆ ಕೈಯನ್ನು ಬೀಸಿ ಮೇಲೆದ್ದು, ಆಕಾಶದ ಕಡೆ ಕೈಯನ್ನು ಬೀಸಿ ನಿಂತಲ್ಲೇ ತಿರುಗುತ್ತಾ ಒಟ್ಟಾಗಿ ಸುತ್ತುತ್ತಾ ಮಾಡುವ ನೃತ್ಯವು ತುಂಬಾ ಚೆನ್ನಾಗಿರುತ್ತಿತ್ತು. ಕೆಲವರು ಕೋಲುಗಳನ್ನು ಹುಯ್ಯುತ್ತಾ ಹಾಡುಗಳನ್ನು ಹೇಳುತ್ತಿದ್ದರು. ಈ ಹಾಡುಗಳ ಅರ್ಥವೇನೆಂದು ನಮ್ಮ ತಾಯಿಯವರು ಒಮ್ಮೆ ಕೇಳಿದಾಗ ಸತ್ತೂರಿನ ತಾಂಡಾದ ಪೂರ್ವ ಮಹಿಳೆ ಹೇಳಿದ್ದು, ‘ಇವೆಲ್ಲಾ ಕೃಷ್ಣ ಪರಮಾತ್ಮನ ಲೀಲೆಗಳು ಅಮ್ಮೋರೇ’ ಎಂದು. ಈಗ ಈ ಉಡುಗೆಗಳಾಗಲೀ ಈ ನೃತ್ಯಗಳಾಗಲೀ ಆಧುನಿಕತೆಯ ಸೋಂಕಿನಿಂದ ತಮ್ಮ ಮೂಲ ರೂಪಗಳನ್ನು ಕಳೆದುಕೊಳ್ಳುತ್ತಿವೆ.

ನಮ್ಮ ಸ್ಟುಡಿಯೋಗೆ ಫೋಟೋಗಳನ್ನು ತೆಗೆಸಿಕೊಳ್ಳಲು ಕುಟುಂಬ ಸಮೇತರಾಗಿ ಬರುತ್ತಿದ್ದ ವಯೋವೃದ್ಧ ಅರೇಹಳ್ಳಿ ಲಚ್ಮಾನಾಯಕರು ಇರಬೇಕು. ಒಮ್ಮೆ ನಮ್ಮ ತಂದೆ ಸುಪ್ರಸಿದ್ಧ ಚಿತ್ರ ಕಲಾವಿದ ಹಾಗೂ ಹಿರಿಯ ಛಾಯಾಗ್ರಾಹಕ ಭುಜಂಗರಾಯ ಶಾಸ್ತ್ರಿಗಳನ್ನು ಕೇಳಿದರು ‘ರಾಯರೇ ನಮ್ಮ ಮಂದಿ ಡ್ರೆಸ್‌ನಲ್ಲಿ ಕನ್ನಡಿ ಚೂರುಗಳನ್ನು ಅಳವಡಿಸಿಕೊಳ್ಳುವ ಸಂಕೇತ ಏನಿರಬಹುದು?’ ಎಂದು. ಅದಕ್ಕೆ ನಮ್ಮ ತಂದೆಯವರು ನನಗೂ ಸರಿಯಾಗಿ ಗೊತ್ತಿಲ್ಲ ನಾಯ್ಕರೇ, ಕನ್ನಡಿಯ ಚೂರುಗಳಿಂದ ಅಲಂಕೃತವಾದ ಉಡುಗೆಗಳು ಎಲ್ಲಾ ಪಾರ್ಶ್ವಗಳಲ್ಲೂ ಬೆಳಕನ್ನು ಪ್ರತಿಫಲಿಸುತ್ತಾ ಆಕರ್ಷಿಸುತ್ತವೆ. ಜೊತೆಗೆ ಬಹುಷಃ ಇದರ ಸಂಕೇತವೆಂದರೆ ಜ್ಯೋತಿ ಪ್ರಕಾಶವಾಗಲೀ ಜ್ಞಾನ ಪ್ರಕಾಶವಾಗಲೀ ಇಂಗಿ ಹೋಗಬಾರದು. ಸದಾ ಪ್ರತಿಫಲಿಸುತ್ತಾ ಪಸರಿಸುತ್ತಿರಬೇಕು ಎಂಬ ನೀತಿಯನ್ನು ಸಂಕೇತಿಸುತ್ತಿರುವಂತಿದೆ ಎಂದರು.

**- ಹೆಚ್.ಬಿ.ಮಂಜುನಾಥ,**
ಹಿರಿಯ ಪತ್ರಕರ್ತರು, ದಾವಣಗೆರೆ

# ಹೋಳಿ ಆಚರಣೆಯಲ್ಲಿ ಕಣ್ಣುಗಳ ಸುರಕ್ಷತೆ ಮರೆಯಬೇಡಿ !



ಹೋಳಿ ಎಂದರೆ ಬಣ್ಣಗಳ ಹಬ್ಬ, ಸಂತೋಷ, ಸ್ನೇಹ, ಮತ್ತು ಉತ್ಸಾಹ. ಆದರೆ ಈ ಸಡಗರದಲ್ಲಿ ನಮ್ಮ ಕಣ್ಣುಗಳು ಅಪಾಯಕ್ಕೆ ಗುರಿಯಾಗುವ ಸಾಧ್ಯತೆ ತುಂಬಾ ಹೆಚ್ಚಾಗಿದೆ. ರಾಸಾಯನಿಕ ಬಣ್ಣಗಳು, ನೀರಿನ ಬಲೂನುಗಳು, ಮತ್ತು ಧೂಳಿನ ಕಣಗಳಿಂದ ತೀವ್ರವಾದ ಕಣ್ಣುಗಳ ಗಾಯಗಳು ಉಂಟಾಗಬಹುದು. ಒಪ್ಪಂದವಿಲ್ಲದ ಆಟದಲ್ಲಿ ನಿಮ್ಮ ದೃಷ್ಟಿಯನ್ನು ಕಳೆದುಕೊಳ್ಳಬೇಡಿ! ಈ ಹೋಳಿಯನ್ನು ಸುರಕ್ಷಿತವಾಗಿ ಆಚರಿಸಲು ಈ ಸಲಹೆಗಳನ್ನು ಅನುಸರಿಸಿ.

**ಹೋಳಿ ಬಣ್ಣಗಳಿಂದ ಕಣ್ಣುಗಳಿಗೆ ಆಗುವ ಅಪಾಯಗಳು :** ಹೋಳಿ ಬಣ್ಣಗಳಲ್ಲಿ ಸೀಸ, ಪಾದರಸ ಮತ್ತು ಕೈಗಾರಿಕಾ ಡೈಗಳು ಇರುತ್ತದೆ. ಈ ರಾಸಾಯನಿಕ ಗಳು ಕಣ್ಣಿಗೆ ತೀವ್ರವಾದ ಹಾನಿಯನ್ನು ಉಂಟುಮಾಡಬಹುದು. ಸಾಮಾನ್ಯ ಸಮಸ್ಯೆಗಳು:

- ರಾಸಾಯನಿಕ ಸುಟ್ಟ ಗಾಯಗಳು (Chemical Burns): ಕಣ್ಣು ಕೆಂಪಾಗುವುದು, ಉರಿಯುವುದು, ಮತ್ತು ಕರಿಗುಡ್ಡೆ / ಕಾರ್ನಿಯಾ (cornea) ಹಾನಿಯಾಗಬಹುದು.
- ಅಲರ್ಜಿಕ್ ಕೊಂಜಕ್ಟಿವೈಟಿಸ್ (Allergic Conjunctivitis): ನೀರು ಹರಿದು ಕಣ್ಣುಗಳು ಉರಿಯಲು, ಕಡಿಮೆ ಭಾಸವಾಗಲು ಕಾರಣವಾಗಬಹುದು.
- ಕಾರ್ನಿಯಾ ಅಪಘಾತ (Corneal Abrasion): ಒಣ ಬಣ್ಣಗಳಲ್ಲಿ ಇರುವ ಧೂಳಿನ ಕಣಗಳು ಕಣ್ಣುಗಳನ್ನು ಕೊರೆದು ನೋವು ಮತ್ತು ದೃಷ್ಟಿ ಮಂಕಾಗುವಂತೆ ಮಾಡಬಹುದು.
- ಭಾರವಾದ ಪೆಟ್ಟಿನಿಂದ ಆಗುವ ತೊಂದರೆ (Blunt Trauma): ನೀರಿನ ಬಲೂನುಗಳು ಅಥವಾ ತೀವ್ರ ಬಲದಿಂದ ಎಸೆಯುವ ಬಣ್ಣಗಳಿಂದ ಕಣ್ಣಿನ ಒಳಭಾಗದಲ್ಲಿ ರಕ್ತಸ್ರಾವ (intraocular bleeding), ನೇತ್ರಪಟಲ ವಿಭಜನೆ (retinal detachment), ಅಥವಾ ದೀರ್ಘಕಾಲದ ದೃಷ್ಟಿ ಹಾನಿ ಉಂಟಾಗಬಹುದು.

**ಹೋಳಿಯಲ್ಲಿ ಕಣ್ಣುಗಳನ್ನು ರಕ್ಷಿಸಲು ಉಪಾಯಗಳು**

- ನೈಸರ್ಗಿಕ ಬಣ್ಣಗಳನ್ನು ಬಳಸಿ – ಹೂವು, ಹಳದಿ, ಮತ್ತು ಇತರ ಸಸ್ಯೋತ್ಪನ್ನಗಳಿಂದ ತಯಾರಿಸಿದ ಬಣ್ಣಗಳನ್ನು ಬಳಸಿ.
- ರಕ್ಷಣಾತ್ಮಕ ಕಣ್ಣಿನ ಕನ್ನಡಕವನ್ನು (Sunglasses/ Goggles) ಧರಿಸಿ – ಇದು ಕಣ್ಣುಗಳನ್ನು ಬಣ್ಣದಿಂದ ರಕ್ಷಿಸುತ್ತದೆ.
- ಕಣ್ಣಿಗೆ ಕೈ ಹಾಕುವುದನ್ನು ತಪ್ಪಿಸಿ – ಬಣ್ಣ ಕಣ್ಣಿಗೆ ಹೋದರೆ ತಕ್ಷಣ ಒರೆಸದೆ, ಸ್ವಚ್ಛವಾದ ನೀರಿನಿಂದ ತೊಳೆಯಿರಿ. ಸಾಬೂನು ಅಥವಾ ಕಠಿಣ ಸ್ವಚ್ಛಕಗಳನ್ನು ಬಳಸದಿರಿ.
- ಕಾಂಟಾಕ್ಟ್ ಲೆನ್ಸ್ ಬಳಸಬೇಡಿ – ಬಣ್ಣಗಳು ಲೆನ್ಸ್‌ಗೆ ಅಂಟಿಕೊಂಡು ಕಣ್ಣಿನ ಸೋಂಕು ಉಂಟುಮಾಡಬಹುದು.

ಯಾವಾಗ ವೈದ್ಯರನ್ನು ಸಂಪರ್ಕಿಸಬೇಕು?

ಹೋಳಿ ಆಡಿದ ನಂತರ ಕಣ್ಣುಗಳು ಕೆಂಪಾದರೆ, ನೋವು, ದೃಷ್ಟಿ ಹಾಳಾಗುವುದು, ಬೆಳಕಿಗೆ ತೀವ್ರ ಸ್ಪಂದನೆ (light sensitivity) ಕಂಡುಬಂದರೆ, ತಕ್ಷಣ ನೇತ್ರತಜ್ಞರನ್ನು (ophthalmologist) ಸಂಪರ್ಕಿಸಿ. ನೀವು ಸುರಕ್ಷಿತ ವಾಗಿ ಈ ಬಣ್ಣಗಳ ಹಬ್ಬವನ್ನು ಆನಂದಿಸಿ, ಕಣ್ಣುಗಳ ಆರೈಕೆ ಮಾಡಿಕೊಳ್ಳಿ! ಹೋಳಿ ಹಬ್ಬ ಹರ್ಷದಿಂದ ಇರಲಿ, ಕಣ್ಣುಗಳು ಸುರಕ್ಷಿತವಾಗಿರಲಿ!

**- ಡಾ. ಜಿ.ಯು. ಅಭಿಷೇಕ್**, ನೇತ್ರ ರೋಗ ತಜ್ಞರು, ಐ ಕೇರ್ ಸೆಂಟರ್, ದಾವಣಗೆರೆ.

## ಶೀಘ್ರ ನೋಂದಣಿ

**(1ನೇ ಪುಟದಿಂದ)** ಕ್ವಿಂಟಲ್‌ನಂತೆ ಒಬ್ಬ ರೈತರಿಂದ ಗರಿಷ್ಠ 20 ಕ್ವಿಂಟಾಲ್ ಖರೀದಿ ಮಾಡಲಾಗುವುದು ಎಂದು ಸಚಿವರು ತಿಳಿಸಿದ್ದಾರೆ. ಖರೀದಿ ಪ್ರಕ್ರಿಯೆ ನಂತರ ರೈತರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಹಣ ಜಮಾ ಮಾಡಲಾಗುವುದು. ರೈತರು ತಮ್ಮ ಸಮೀಪದ ಪ್ರಾಥಮಿಕ ಪತ್ತಿನ ಸಹಕಾರ ಸಂಘ, ರೈತ ಉತ್ಪಾದಕರ ಕಂಪನಿ, ತಾಲೂಕು ಹುಟ್ಟುವಳಿ ಸಹಕಾರ ಸಂಘಗಳಲ್ಲಿ ತಮ್ಮ ಫ್ರೂಟ್ಸ್ ನ ಎಫ್‌ಐಡಿ ಸಂಖ್ಯೆ ನೀಡಿ ನೋಂದಣಿ ಮಾಡಿಕೊಳ್ಳಬೇಕು ಎಂದು ತಿಳಿಸಿದ್ದಾರೆ.

## ವೀರಶೈವ-ಲಿಂಗಾಯತರು ಜಾಗೃತರಾಗಲಿ



**ಶ್ರೀ ರೇಣುಕಾಚಾರ್ಯರ ಜಯಂತಿ ಯುಗಮಾನೋತ್ಸವ ಕಾರ್ಯಕ್ರಮಕ್ಕೆ ಅನಿವಾರ್ಯ ಕಾರಣಗಳಿಂದ ಗೈರು ಹಾಜರಾಗಿದ್ದ ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾದ ಶಾಮನೂರು ಶಿವಶಂಕರಪ್ಪ ಅವರನ್ನು ಸಭಾ ಕಾರ್ಯಕ್ರಮದ ನಂತರ ಅವರ ಗೃಹ ಕಚೇರಿಗೆ ತೆರಳಿ, ವೀರಶೈವ ಮಹಾಸಭಾದ ಜಿಲ್ಲಾ ಘಟಕದಿಂದ ಗೌರವಿಸಲಾಯಿತು. ಸಭಾ ಗೌರವಾಧ್ಯಕ್ಷ ಎಸ್.ಜಿ. ಉಳುವಯ್ಯ, ಶ್ರೀಶೈಲ ಮಠದ ವ್ಯವಸ್ಥಾಪಕ ಬನ್ನಯ್ಯ ಮತ್ತಿತರರು ಎಸ್ಸೆಸ್ ಅವರನ್ನು ಸನ್ಮಾನಿಸಿದರು.**

**(1ನೇ ಪುಟದಿಂದ)** ಶಾಂತಿ, ನೆಮ್ಮದಿ ನೆಲೆಸಬೇಕು ಹಾಗೂ ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಸರ್ಕಾರವು ಮಹಾನ್ ಪುರುಷರ ಜಯಂತಿಗಳನ್ನು ಆಚರಿಸುತ್ತಿದೆ ಎಂದರು.

ಸಮಾರಂಭದ ನೇತೃತ್ವ ವಹಿಸಿದ್ದ ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಈ ಬಾರಿ ಜಯಂತಿಯನ್ನು ವೈಭವದಿಂದ ಆಚರಿಸುತ್ತಿರುವುದು ವಿಶೇಷವಾಗಿದೆ. ಮಹಾಸಭಾದ ಎಲ್ಲ ಪದಾಧಿಕಾರಿಗಳು ಅರ್ಥಪೂರ್ಣವಾಗಿ ಕಾರ್ಯಕ್ರಮ ಆಯೋಜಿಸಿರುವುದು ಶ್ಲಾಘನೀಯವಾಗಿದೆ ಎಂದು ಹೇಳಿದರು.

ಸರ್ಕಾರದ ವತಿಯಿಂದ ಜಿಲ್ಲಾಧಿಕಾರಿಗಳ ಕಚೇರಿಯಲ್ಲೂ ಕೂಡ ಜಯಂತಿ ಆಚರಿಸಲಾಗಿದೆ. ಶಾಮನೂರು ಅವರು, ಮಹಾಸಭಾಕ್ಕೆ ಹೊಸ ದಿಕ್ಕು ತೋರಿಸಿದ್ದಾರೆ. ಬರುವ ದಿನಗಳಲ್ಲಿ ಜಯಂತಿ ಮತ್ತಷ್ಟು ವಿಜೃಂಭಣೆಯಿಂದ ಆಚರಿಸಲು ಎಲ್ಲರೂ ಶ್ರಮಿಸೋಣ ಎಂದರು.

ತಾವರಕೆರೆಯ ಶಿಲಾ ಮಠದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಮನೆ ಒಳಗೆ ರೇಣುಕಾಚಾರ್ಯ ಜಯಂತಿ ಸೀಮಿತವಾಗಿತ್ತು. ಆದರೆ ಸರ್ಕಾರಿ ಕಾರ್ಯಕ್ರಮವಾಗಿ ಘೋಷಣೆಯಾದ ಮೇಲೆ ಕಾರ್ಯಕ್ರಮ ಉತ್ತಮವಾಗಿ ನಡೆಯುತ್ತಿದೆ. ಲಿಂಗಾಯತ ಧರ್ಮ ಸೀಮಿತ ಧರ್ಮವಲ್ಲ. ಇದು ಸೀಮಾತೀತ ಧರ್ಮವಾಗಿದ್ದು, ಎಲ್ಲರನ್ನೂ ಒಪ್ಪಿಕೊಂಡಿದೆ ಎಂದರು.

ಇದೇ ಸಂದರ್ಭದಲ್ಲಿ ಸಾಹಿತಿ ಶತಾಯುಷಿ ಪಂ.ಎಸ್.ಎಂ. ರುದ್ರಮುನಿ ಅಯ್ಯ ಅವರಿಗೆ ಶ್ರೀ ಆದಿ ಜಗದ್ಗುರು ರೇಣುಕಾಚಾರ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮುಷ್ಟೂರು ಓಂಕಾರ ಮಠದ ಶ್ರೀ ರುದ್ರಮುನಿ ಶಿವಾಚಾರ್ಯ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಗೌರವಾಧ್ಯಕ್ಷ ಎಸ್.ಜಿ. ಉಳುವಯ್ಯ ಅಧ್ಯಕ್ಷತೆ ವಹಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿಲ್ಲಾ ಚುಟುಕು ಪರಿಷತ್ ಅಧ್ಯಕ್ಷ ಕೆ.ಎಸ್. ವೀರಭದ್ರಪ್ಪ ತೆಲಿಗಿ, ಚಂದ್ರಣ್ಣ ಐಗೂರು, ಎನ್.ಎ. ಮುರುಗೇಶ್, ದೇವರಮನೆ ಶಿವಕುಮಾರ್, ಬಿ.ಎಂ ವಾಗೀಶ ಸ್ವಾಮಿ, ಹೆಚ್.ಎಂ. ರುದ್ರಮುನಿಸ್ವಾಮಿ, ಇ.ಹೆಚ್. ರಾಕೇಶ್, ಸುಷ್ಮಾ ಪಾಟೀಲ್, ದಾಕ್ಷಾಯಣಮ್ಮ ಅಜಿತ್ ಆಲೂರು, ಜಯಪ್ರಕಾಶ್ ಮಾಗಿ, ಕಿರುವಾಡಿ ಸೋಮಣ್ಣ, ಹನುಮಂತಪ್ಪ, ವಿನುತಾ ರವಿ ಹಾಗೂ ಇತರರು ಉಪಸ್ಥಿತರಿದ್ದರು.

ವಾಗೀಶ್ ಆವರಗೊಳ್ಳ ಧ್ವಜವಂದನೆ ನೆರವೇರಿಸಿದರು. ಅಜಯ್ ನಾರಾಯಣ್ ಪ್ರಾರ್ಥಿಸಿದರು. ಶಂಭು ಎಸ್. ಉರೇಕೊಂಡಿ ಸ್ವಾಗತಿಸಿದರು. ಪಂ.ಹೆಚ್.ಎ. ಶಿವಕುಮಾರ ಸ್ವಾಮಿ ಮತ್ತು ಶಿಷ್ಯ ಬಳಗದವರು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಸೌಭಾಗ್ಯಮ್ಮ ನಿರೂಪಿಸಿದರು. ಪಿ.ಬಿ. ರಾಜಶೇಖರ್ ವಂದಿಸಿದರು.

## ಖರೀದಿ ಒಪ್ಪಂದ

**(1ನೇ ಪುಟದಿಂದ)** ಈ ರಡಾರ್‌ಗಳ ಕಾರಣದಿಂದಾಗಿ ವಾಯುಪಡೆ ಸನ್ನದ್ಧವಾಗಿರುವ ಸಾಮರ್ಥ್ಯ ಇನ್ನಷ್ಟು ಹೆಚ್ಚಾಗಲಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

## ಐದು ವರ್ಷ ಕಾಲ ನಾನೇ ಮುಖ್ಯಮಂತ್ರಿ



ಬೆಂಗಳೂರು, ಮಾ. 12 - ಮುಂದಿನ ಐದು ವರ್ಷಗಳ ಕಾಲ ನಾನೇ ಮುಖ್ಯಮಂತ್ರಿ ಆಗಿರುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಗ್ಯಾರಂಟಿ ಸಮಿತಿಗಳಿಗೆ ಕಾಂಗ್ರೆಸ್ ಕಾರ್ಯಕರ್ತರನ್ನು ನೇಮಿಸಿರುವುದಕ್ಕೆ ಆಕ್ಷೇಪಿಸಿ, ಪ್ರತಿಪಕ್ಷಗಳ ಸದಸ್ಯರು ವಿಧಾನಸಭೆಯಲ್ಲಿ ಪ್ರತಿಭಟನೆ ಮಾಡುತ್ತಿದ್ದ ನಡುವೆ ಸಿದ್ದರಾಮಯ್ಯ ಮಾತನಾಡಿದರು.

ಮುಂದಿನ ಚುನಾವಣೆಯಲ್ಲಿ ನಾವೇ ಗೆಲ್ಲುತ್ತೇವೆ, ನೀವು ಗೆಲ್ಲಲು ಸಾಧ್ಯವಿಲ್ಲ. ಇದರಲ್ಲಿ ಎರಡನೇ ಮಾತೇ ಇಲ್ಲ ಎಂದು ಮುಖ್ಯಮಂತ್ರಿ ಹೇಳಿದರು. ಚನ್ನಪಟ್ಟಣ, ಶಿಗ್ಗಾಂವ್ ಹಾಗೂ ಸಂಡೂರು ವಿಧಾನಸಭೆಗಳಿಗೆ ನಡೆದ ಉಪಚುನಾವಣೆಯಲ್ಲಿ ಪ್ರತಿಪಕ್ಷಗಳು ಸೋತಿವೆ ಎಂದೂ ಸಿದ್ದರಾಮಯ್ಯ ಹೇಳಿದರು.

ಉಪ ಚುನಾವಣೆಯಲ್ಲಿ ಪ್ರತಿ ಪಕ್ಷಗಳು ಸವಾಲು ಹಾಕಿರುವುದಕ್ಕೆ ಉತ್ತರ ದೊರೆತಿದೆ. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಮತ್ತೆ ನಾವೇ ಗೆಲ್ಲುತ್ತೇವೆ ಹಾಗೂ ನಾನೇ ಮುಖ್ಯಮಂತ್ರಿ ಆಗಿರುತ್ತೇನೆ ಎಂದವರು ಹೇಳಿದರು. ಮುಖ್ಯಮಂತ್ರಿ ಸ್ಥಾನಕ್ಕಾಗಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಡುವೆ ಹಗ್ಗ ಜಗ್ಗಾಟ ನಡೆದಿದೆ ಎಂಬ ವರದಿಗಳ ನಡುವೆ ಸಿದ್ದರಾಮಯ್ಯ ಹೇಳಿಕೆ ಪ್ರಾಮುಖ್ಯತೆ ಪಡೆದುಕೊಂಡಿದೆ.

## ಶಿಕ್ಷಣ ಇಲಾಖೆ ವಿಸರ್ಜಿಸುತ್ತಿರುವ ಟ್ರಂಪ್

ವಾಷಿಂಗ್ಟನ್, ಮಾ. 12 - ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಶಿಕ್ಷಣ ಇಲಾಖೆಯನ್ನು ವಿಸರ್ಜಿಸುವ ಇಂಗಿತ ವ್ಯಕ್ತಪಡಿಸಿದ್ದಾರೆ. ಶಿಕ್ಷಣ ಇಲಾಖೆಯ ನೂತನ ಮುಖ್ಯಸ್ಥರಾದ ಲಿಂಡಾ ಮ್ಯಾಕ್‌ಮೋಹನ್ ಅವರು ‘ತಮ್ಮ ಕೆಲಸವನ್ನು ಕಳೆದುಕೊಳ್ಳಬೇಕು’ ಎಂದು ಟ್ರಂಪ್ ತಿಳಿಸಿದ್ದಾರೆ.

ಟ್ರಂಪ್ ಅಧಿಕಾರ ವಹಿಸಿಕೊಂಡ ನಂತರ ಶಿಕ್ಷಣ ಇಲಾಖೆಯ ಸಿಬ್ಬಂದಿಯನ್ನು ಅರ್ಧದಷ್ಟು ಕಡಿತಗೊಳಿಸಲಾಗಿದೆ. ಇಲಾಖೆಯನ್ನೇ ಮುಚ್ಚಲು ಕಾರ್ಯಕಾರಿ ಆದೇಶ ಹೊರಡಿಸಲು ಅವರು ಪರಿಶೀಲಿಸುತ್ತಿದ್ದಾರೆ. ಆದರೆ ಇಡೀ ಇಲಾಖೆ ಮುಚ್ಚುವುದು ತೊಡಕಿನ ಕೆಲಸವಾಗಿದೆ. ಇದಕ್ಕಾಗಿ ಶಾಸನ ಸಭೆಯ ಒಪ್ಪಿಗೆ ಅಗತ್ಯವಿದೆ.

ಟ್ರಂಪ್ ಆಡಳಿತವು ಶಿಕ್ಷಣ ಇಲಾಖೆಯ ಸಾಕಷ್ಟು ಕಾರ್ಯಗಳನ್ನು ಬದಲಿಸಿದೆ. ಟ್ರಂಪ್ ಸಲಹೆಗಾರ ಎಲಾನ್ ಮಸ್ಕ್ ಅವರ ದಕ್ಷತಾ ಇಲಾಖೆಯು ಶಿಕ್ಷಣ ಇಲಾಖೆಯ ಹತ್ತಾರು ಗುತ್ತಿಗೆಗಳನ್ನು ರದ್ದುಗೊಳಿಸಿದೆ.

ಶಾಲಾ ಕಾಲೇಜುಗಳಿಗೆ ಅನುದಾನ ನೀಡುವುದು ಶಿಕ್ಷಣ ಇಲಾಖೆಯ ಪ್ರಮುಖ ಕಾರ್ಯವಾಗಿದೆ. ಈ ಇಲಾಖೆಯನ್ನು ಮುಚ್ಚಿದರೆ ಅನುದಾನ ವಿತರಿಸುವ ಕಾರ್ಯವನ್ನು ಬೇರೆ ಇಲಾಖೆಗೆ ವಹಿಸಬೇಕಾಗುತ್ತದೆ. ಜನಾಂಗೀಯ ಆಧಾರಿತ ಸಿದ್ಧಾಂತ, ಲಿಂಗ ಆಧಾರಿತ ನೀತಿ, ರಾಜಕೀಯ ಪ್ರೇರಿತ ಪಠ್ಯ ಸೇರಿದಂತೆ ಹಲವಾರು ಹಲವಾರು ಕಾರಣಗಳಿಗಾಗಿ ಶಿಕ್ಷಣ ಇಲಾಖೆ ಬಗ್ಗೆ ಟ್ರಂಪ್ ಅಸಮಾಧಾನ ಹೊಂದಿದ್ದಾರೆ. ಅಮೆರಿಕದ ಸಾರ್ವಜನಿಕ ಶಾಲೆಗಳ ಬಜೆಟ್‌ನಲ್ಲಿ ಒಕ್ಕೂಟ ಸರ್ಕಾರ ದಿಂದ ಬರುವ ಅನುದಾನದ ಪ್ರಮಾಣ ಶೇಕಡಾ 14 ರಷ್ಟು ಮಾತ್ರವಿದೆ. ಕಾಲೇಜುಗಳು ಹಾಗೂ ವಿಶ್ವವಿದ್ಯಾಲಯಗಳು ಒಕ್ಕೂಟದ ಅನುದಾನವನ್ನು ಹೆಚ್ಚಾಗಿ ಅವಲಂಬಿಸಿವೆ.

# 3 ವರ್ಷಗಳಲ್ಲಿ ಡಿಜಿಟಲ್ ಬಂಧನ ವಂಚನೆ ಮೊತ್ತ 21 ಪಟ್ಟು ಹೆಚ್ಚಳ

ನವದೆಹಲಿ, ಮಾ. 12 - 2022 ರಿಂದ 2024ರ ನಡುವೆ ಡಿಜಿಟಲ್ ಬಂಧನ ಸೈಬರ್ ವಂಚನೆಯ ಮೊತ್ತ 21 ಪಟ್ಟು ಹೆಚ್ಚಾಗಿದೆ ಎಂದು ಕೇಂದ್ರ ಸರ್ಕಾರ ರಾಜ್ಯಸಭೆಗೆ ತಿಳಿಸಿದೆ.

ಪ್ರಶ್ನೆ ಒಂದಕ್ಕೆ ಲಿಖಿತ ಉತ್ತರ ನೀಡಿರುವ ಗೃಹ ಖಾತೆ ರಾಜ್ಯ ಸಚಿವ ಬಂಡಿ ಸಂಜಯ್ ಕುಮಾರ್, 2022 ರಲ್ಲಿ ಡಿಜಿಟಲ್ ಬಂಧನ ಹಾಗೂ ಸಂಬಂಧಿಸಿದ ಸೈಬರ್ ಅಪರಾಧದ ಪ್ರಕರಣಗಳ ಸಂಖ್ಯೆ 39,925 ಆಗಿತ್ತು ಹಾಗೂ 91.14 ಕೋಟಿ ರೂ.ಗಳ ವಂಚನೆಯಾಗಿತ್ತು ಎಂದು ಹೇಳಿದರು.

2024ರಲ್ಲಿ ವಂಚನೆ ಪ್ರಕರಣಗಳ ಸಂಖ್ಯೆ 1,23,672 ಕ್ಕೆ ಏರಿಕೆಯಾಗಿದೆ ಹಾಗೂ ವಂಚನೆಯ ಮೊತ್ತ 21 ಪಟ್ಟು ಹೆಚ್ಚಾಗಿ 1935.51 ಕೋಟಿ ರೂ.ಗಳಿಗೆ ತಲುಪಿದೆ ಎಂದು ಸಚಿವರು ತಿಳಿಸಿದ್ದಾರೆ. 2025ರ ಮೊದಲ ಎರಡು ತಿಂಗಳಲ್ಲಿ ಈ ರೀತಿಯ 17,718 ಪ್ರಕರಣಗಳು ನಡೆದಿವೆ. ವಂಚನೆಯ ಮೊತ್ತ 210.21 ಕೋಟಿ ರೂಪಾಯಿ ಆಗಿದೆ ಎಂದವರು ಹೇಳಿದರು.

ಸೈಬರ್ ಅಪರಾಧ ಪ್ರಕರಣಗಳನ್ನು ರಾಷ್ಟ್ರೀಯ ಸೈಬರ್ ಅಪರಾಧ ದಾಖಲು ಪೋರ್ಟಲ್ (ಎನ್‌ಸಿಆರ್‌ಪಿ) ಮೂಲಕ ದಾಖಲಿಸಲಾಗುತ್ತಿದೆ. ನಂತರ ಇವುಗಳನ್ನು ಎಫ್.ಐ.ಆರ್. ಆಗಿ ಪರಿವರ್ತಿಸಲಾಗುತ್ತಿದೆ ಎಂದು ಸಚಿವ ಕುಮಾರ್ ತಿಳಿಸಿದ್ದಾರೆ.

ಡಿಜಿಟಲ್ ಬಂಧನದ ವಿರುದ್ಧ ಕ್ರಮ ತೆಗೆದುಕೊಳ್ಳಲು ಕೇಂದ್ರ ಗೃಹ ಸಚಿವಾಲಯ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ. ಇದುವರೆಗೂ 3962 ಸ್ಕೈಪ್ ಐ.ಡಿ. ಹಾಗೂ 83,668 ವಾಟ್ಸಪ್ ಖಾತೆಗಳನ್ನು ಸ್ಥಗಿತಗೊಳಿಸಲಾಗಿದೆ ಎಂದವರು ಹೇಳಿದರು. ಹಣಕಾಸು ವಂಚನೆಗಳನ್ನು ವಂಚನೆಗಳ ಕುರಿತು ತಕ್ಷಣವೇ ವರದಿ ಮಾಡಲು ಹಾಗೂ ವಂಚಕರು ಹಣ ಕಬಳಿಸುವುದನ್ನು ತಡೆಯಲು 2021 ರಲ್ಲಿ ನಾಗರಿಕ ಹಣಕಾಸು ಸೈಬರ್ ವಂಚನೆ ವರದಿ ವ್ಯವಸ್ಥೆ ರೂಪಿಸಲಾಗಿದೆ. ಇದುವರೆಗೂ 13.36 ಲಕ್ಷ ದೂರುಗಳ ಆಧಾರದ ಮೇಲೆ 4,386 ಕೋಟಿ ರೂ. ವಂಚನೆಯಾಗುವುದನ್ನು ತಪ್ಪಿಸಲಾಗಿದೆ ಎಂದವರು ಹೇಳಿದರು.

ಆನ್‌ಲೈನ್ ವಂಚನೆ ಹಾಗೂ ಸೈಬರ್ ದೂರುಗಳಿಗೆ ಸಂಬಂಧಿಸಿದಂತೆ ನೆರವಾಗಲು 1930 ಸಹಾಯವಾಣಿ ಸಂಖ್ಯೆ ಸಹ ಆರಂಭಿಸಲಾಗಿದೆ.


**ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್**
ದಿನಾಂಕ:02/04/2025 ರಿಂದ 09/04/2025 ರ ವರೆಗೆ
7 ದಿನಗಳ ದಕ್ಷಿಣ ಭಾರತ ಪ್ರವಾಸ. ರಾಮೇಶ್ವರ, ಮಧುರೈ, ಕನ್ಯಾಕುಮಾರಿ, ಪಳನಿ, ಚಿದಂಬರಂ,ತಂಜಾವೂರು ಇನ್ನು ಮುಂತಾದ ಪ್ರೇಕ್ಷಣೀಯ ಸ್ಥಳಗಳು. ಇನ್ನು ಕೆಲವೇ ಸೀಟುಗಳಿವೆ.
94485 33928, 90086 26473

**KHB ಸೈಟ್ ಮಾರಾಟಕ್ಕೆ**
ದಾವಣಗೆರೆ ಯಿಂದ ಮೊದಲ ಭಾಗದ ಟ್ಯಾಂಕ್ ಪಾರ್ಕ್ ಎದುರು 30x40 ಸೌತ್(33ಲಕ್ಷ 30x40 ಸೌತ್ ಪಾರ್ಕ್ ಎದುರು (32.5ಲಕ್ಷ
ಕಿರಣ್ ಬೂಸ್ನೂರ್ ಏಜೆಂಟ್
94824 63409
98440 63409, 97315 63409

**ಗುಮಾಸ್ತರು ಬೇಕಾಗಿದ್ದಾರೆ**
ಕನಿಷ್ಠ ಎಸ್.ಎಸ್.ಎಲ್.ಸಿ ಅಥವಾ ಪಿಯುಸಿ ಓದಿರುವ ಯುವಕರು ಸೂಪರ್ ವೈಸರ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
ಶ್ರೀನಿವಾಸ ಆಗ್ರೋ ಇಂಡಸ್ಟ್ರೀಸ್,
ಬಸಾಪುರ ರಸ್ತೆ, ಬಂಬೂ ಬಜಾರ್, ದಾವಣಗೆರೆ.
98445 37171

**ಬೇಕಾಗಿದ್ದಾರೆ**
ಬಿ.ಎ., ಬಿ.ಇಡಿ., ಬಿ.ಎಸ್ಸಿ., ಬಿ.ಇಡಿ., ಡಿ.ಇಡಿ. ಹಾಗೂ ಕಂಪ್ಯೂಟರ್ ತರಬೇತಿ ಹೊಂದಿದ ಶಿಕ್ಷಕರು ಬೇಕಾಗಿದ್ದಾರೆ.
ನಂದಗೋಕುಲ ಆಂಗ್ಲ ಮಾಧ್ಯಮ ನರ್ಸರಿ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ
ದೇವರಾಜ ಅರಸು ಬಡಾವಣೆ, ಸಿ ಬ್ಲಾಕ್, 6ನೇ ಕ್ರಾಸ್, (ಹೊಸ ಆರ್‌ಟಿಓ ಆಫೀಸ್ ಹಿಂಭಾಗ), ಕೊಂಡಜ್ಜಿ ರಸ್ತೆ, ದಾವಣಗೆರೆ.
99640 17729 / 81479 30221

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 50x80, 40x60 North, 120 ಅಡಿ ರೋಡಿಗಿದೆ, 50x80 East, 40x60, 40x60 South ಅಕ್ಕ-ಪಕ್ಕ, 80 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ವಿವೇಕಾನಂದ ಬಡಾವಣೆಯಲ್ಲಿ ಕೃಷಿ ಕೇಂದ್ರ ಹಿಂಭಾಗ 40x60 West, 30x54 North, 30x70 North, 40x60 North.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟ್ ಮಾರಾಟಕ್ಕಿದೆ**
ಕೇವಲ 1000/- ಅಡಿ ಮಾತ್ರ ಹರಿಹರದ ಅಮರಾವತಿ ಬಡಾವಣೆಯ ಫೈನಲ್ ಅಪ್ರೂವಲ್ ಸೈಟ್ 40x50 ಸೈಜಿನ ಪೂರ್ವ ಉತ್ತರ ಸೈಟ್ ಮಾರಾಟಕ್ಕಿದೆ.
83102 75164

**ಬೇಕಾಗಿದ್ದಾರೆ**
ಹೊಂಬಾಳೆ ಡಿಜಿಟಲ್ ಹರಿಹರ
ಸೇಲ್ಸ್ ಎಕ್ಸಿಕ್ಯೂಟಿವ್-2
ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್-10
ಹುಡುಗರು-ಹುಡುಗಿಯರು ಬೇಕಾಗಿದ್ದಾರೆ.
99860 66529, 7760310603

**ಸೈಟುಗಳು ಮತ್ತು ಮನೆ ಮಾರಾಟಕ್ಕೆ ಇವೆ**
ಎಂಸಿಸಿ ‘ಬಿ’ ಉತ್ತರ 40x60 ಮನೆ
ಎಂಸಿಸಿ ‘ಬಿ’ ಪಶ್ಚಿಮ 40x60 ಮನೆ
ಎಂಸಿಸಿ ‘ಬಿ’ ಪೂರ್ವ 40x60 ಸೈಟ್
ಎಂಸಿಸಿ ‘ಎ’ ಪಶ್ಚಿಮ-ದಕ್ಷಿಣ 44x60
ಏಜೆಂಟರು
81231 15137

**ಬೇಕಾಗಿದ್ದಾರೆ**
ಬಾರ್ & ರೆಸ್ಟೋರೆಂಟ್‌ನಲ್ಲಿ ಸರ್ವರ್ ಮತ್ತು ಕಿಚನ್ ಸಹಾಯಕರು ಬೇಕಾಗಿದ್ದಾರೆ. ಅನುಭವ ಇದ್ದವರಿಗೆ ಆದ್ಯತೆ. ಸಂಪರ್ಕಿಸಿ
97316 45909
94489 47909

**ಸೈಟ್ ಮಾರಾಟಕ್ಕಿದೆ**
30x100 ಅಳತೆ ಇರುವ ಪಿಲ್ಲರ್ ಕಟ್ಟಿಸಿರುವ ಸೈಟ್ ಮಾರಾಟಕ್ಕಿದೆ. 4ನೇ ಮೇನ್, 2ನೇ ಕ್ರಾಸ್, ವಿನೋಬನಗರ.
93410 11732

**ಕೆಲಸಕ್ಕೆ ಬೇಕಾಗಿದ್ದಾರೆ**
ಬೇಸಿಕ್ ಕಂಪ್ಯೂಟರ್ ಆಗಿರುವ ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ.
ಎಸ್.ಡಿ. ಫೋಟೋ ಸ್ಟುಡಿಯೋ ಕೃಷ್ಣ ಕಾಂಪ್ಲೆಕ್ಸ್, ಹಳೇ ಬಸ್ ನಿಲ್ದಾಣದ ಎದುರುಗಡೆ, ದುರ್ಗಾಂಬ ಟ್ರಾವೆಲ್ಸ್ ಹತ್ತಿರ, ಪಿ.ಬಿ. ರಸ್ತೆ, ದಾವಣಗೆರೆ.
98449 05344

**ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ**
ಭಗೀರಥ ಸರ್ಕಲ್ ಹತ್ತಿರ 80 ಅಡಿ ರೋಡಿಗಿದೆ, 25x40, 25x40 South ಅಕ್ಕ-ಪಕ್ಕ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಪಿಬಿ ರೋಡಿಗೆ ಹತ್ತಿರ ಶನೇಶ್ವರ ದೇವಸ್ಥಾನ ಹಿಂಭಾಗ 30x40, 30x40 East ಅಕ್ಕ-ಪಕ್ಕ, Rate - 2600/-
ದೈವಿಕ್ ಐನಳ್ಳಿ ಏಜೆಂಟ್
99456 43223

**2KG ಬಟ್ಟೆ ಖರೀದಿಸಿ ಮತ್ತು ಪಡೆಯಿರಿ**
1 KG ಬಟ್ಟೆ Free 699/- 1KG ಗೆ (ತೂಕದ ಲೆಕ್ಕದ ಬಟ್ಟೆ ಅಂಗಡಿ) ಅರುಣಾ ಟಾಕೀಸ್ ಎದುರು, ರೈಲ್ವೆ ಗೇಟ್ ಹತ್ತಿರ, ಹೊಂಡದ ರಸ್ತೆ, ದಾವಣಗೆರೆ.
83102 75164

**LMNT ನ್ಯೂರೋಥೆರೆಪಿ**
ಗ್ಯಾಸ್ಟ್ರಿಕ್, ಅಸಿಡಿಟಿ, IBS, ಅಜೀರ್ಣತೆ, ನಿದ್ರಾಹೀನತೆ, ನಿಶಕ್ತಿ, ಡಿಪ್ರೆಷನ್, ಮೈಗ್ರೇನ್‌ಗೆ ನಿಶ್ಚಿತ ಪರಿಹಾರ.
ಅಶೋಕ ವಿ.ಕೆ. ನವಚೇತನ ವೆಲ್ನೆಸ್ ಸೆಂಟರ್, 8ನೇ ಮೇನ್, ಮೆಡಿಕಲ್ ಬಾಯ್ಸ್ ಹಾಸ್ಟೆಲ್ ರೋಡ್, ಎಂಸಿಸಿ ‘ಬಿ’ ಬ್ಲಾಕ್, ದಾವಣಗೆರೆ.
99726 00713

**ಶ್ರೀ ಬಸವೇಶ್ವರ ಬೋರ್‌ವೆಲ್ಸ್**
ಮನೆಯ ಒಳಗೂ, ಹೊರಗೂ $6^1/_2$ & $4^1/_2$ 200 ಅಡಿ, 400 ಅಡಿಯವರೆಗೂ ಕೊರೆಯಲಾಗುವುದು.
99008 92916

**ಬೇಕಾಗಿದ್ದಾರೆ**
ಹೈದರಾಬಾದ್‌ನ ಪಿ.ಎಸ್. ರೆಸ್ಟೋರೆಂಟ್‌ನಲ್ಲಿ ದಾವಣಗೆರೆ ಬೆಣ್ಣೆ ದೋಸೆ ಮಾಡಲು ದೋಸೆ ಭಟ್ಟರು, ಇಡ್ಲಿ ಇತರೆ ತಿನಿಸುಗಳನ್ನು ಮಾಡಲು ಭಟ್ಟರು ಮತ್ತು ಸೌತ್ ಇಂಡಿಯನ್ ಕುಕ್ ಬೇಕಾಗಿದ್ದಾರೆ. ಉತ್ತಮ ಸಂಬಳ ಹಾಗೂ ಉಚಿತ ಊಟ, ವಸತಿ ಸೌಲಭ್ಯವಿದೆ. ಸಂಪರ್ಕಿಸಿ.
94486 90158

**ಸೈಟು ಮಾರಾಟಕ್ಕಿವೆ**
ಹಳೆ ಕುಂದುವಾಡದಲ್ಲಿರುವ 29.11× 28.10 ಅಡಿ ಅಳತೆಯ ದಕ್ಷಿಣ ಸೈಟು ಹಾಗೂ ಹರಿಹರದ ಶೇರಾಪುರದಲ್ಲಿರುವ 40× 60( ಉತ್ತರ) KHB ನಿವೇಶನವು (ನೌಕರರ ಸಂಘದವರು ನಿರ್ಮಿಸುತ್ತಿರುವ ಲೇಔಟ್ ಹತ್ತಿರ) ಮಾರಾಟಕ್ಕಿವೆ. ಸಂಪರ್ಕಿಸಿ :
99723 43286

**ಓಂ ವರಸಿದ್ಧಿ ವಿನಾಯಕ**
SS ದಾವಣಗೆರೆ ಶೈಲಿಯ ಕ್ಲೌಡ್ ಕಿಚನ್ ನಮ್ಮ ಮನೆಯಿಂದಲೇ ಊಟ ತಯಾರಿಸಿ ನೀವು ಇರುವ ಸ್ಥಳಕ್ಕೆ ಕಳಿಸುತ್ತೇವೆ. ಸಂಪರ್ಕಿಸಿ :
+91 91102 74329

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಕೆಲಸಕ್ಕೆ ಬೇಕಾಗಿದ್ದಾರೆ**
ವಯೋವೃದ್ಧ ಪೇಷೆಂಟ್‌ಗಳನ್ನು ನೋಡಿಕೊಳ್ಳಲು ಪುರುಷ ಹಾಗೂ ಮಹಿಳೆಯರು ಬೇಕಾಗಿದ್ದಾರೆ. ಊಟ ಮತ್ತು ವಸತಿ ವ್ಯವಸ್ಥೆ ಇರುತ್ತದೆ.
63638 85792, 63647 29758

**WANTED**
Billing and Sales Persons With computer knowledge. Contact
Bolas Dry Fruits Shop
Hadadi Road, Davangere
99007 08999

**ಬೇಕರಿ ಐಟಮ್ಸ್ ಮಾರಾಟಕ್ಕಿವೆ (Used)**
ವೆಸ್ಟರ್ನ್ ಸಿಂಗಲ್ ಡೋರ್ ಫ್ರಿಡ್ಜ್, ವೆಸ್ಟರ್ನ್ ಡಬಲ್ ಡೋರ್ ಫ್ರಿಡ್ಜ್ ಡಿಸ್ಪ್ಲೇ ಫ್ರಿಡ್ಜ್, ಬೇಕರಿ ಓವನ್ (ಎಲೆಕ್ಟ್ರಾನಿಕ್ಸ್) ಕೇಕ್ ಮಿಕ್ಸರ್ ಒಟ್ಟು 1,95,000 ರೂ.
98866 30907

**WANTED**
S.V. MARKETING DAVANGERE
* Marketing Executive
* Accountant
* Godown Incharge.
63620 23451, 97434 37003

**ಸೈಟು ಮಾರಾಟಕ್ಕಿದೆ**
64x64.50 ಅಳತೆ ಇರುವ ಕಾರ್ನರ್ ಸೈಟ್ ಮಾರಾಟಕ್ಕೆ ಇದೆ. ತರಳಬಾಳು ಬಡಾವಣೆ, ಹಳೆ ಸೇಂಟ್ಸ್ ಜಾನ್ಸ್ ಸ್ಕೂಲ್ ಹಿಂಭಾಗ.
98806 98332

**ಬೇಕಾಗಿದ್ದಾರೆ**
ಆನಗೋಡು, ಸಮೀಪ NH48ನಲ್ಲಿ ಇರುವ BPCL ಪೆಟ್ರೋಲ್ ಬಂಕ್‌ನ 20 KL ಟ್ಯಾಂಕರ್ ಲಾರಿಗೆ HAZARD ಇರುವ ಟ್ಯಾಂಕರ್ ಲಾರಿ ಚಾಲಕರು ಬೇಕಾಗಿದ್ದಾರೆ. ಸೂಕ್ತ ದಾಖಲೆಗಳೊಂದಿಗೆ ಸಂಪರ್ಕಿಸಿ.
99867 01190

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**Building Lease/Rent**
G+3 building suitable for school/college is readily available for lease/ rent with plot measuring 24000sqft Near DC office
73383 89447
78296 06346

**ರೂಮ್ ಬಾಡಿಗೆಗೆ ಇದೆ**
ಸಸ್ಯಹಾರಿಗಳಿಗೆ ಮಾತ್ರ
ವಿಳಾಸ : KSRTC ಬಸ್ ಸ್ಟ್ಯಾಂಡ್ ಹಿಂಭಾಗ, ಗಣೇಶ್ ಲೇಔಟ್.
70194 69302

**ಸೈಟುಗಳು ಮಾರಾಟಕ್ಕಿವೆ**
ಶಾಮನೂರು ಹತ್ತಿರ ಡಾಲರ್ಸ್ ಕಾಲೋನಿಯಲ್ಲಿ 30x56 North, 30x45 East, 30x45 West, 30x40 North, 30x40 South.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬಾಡಿಗೆ ಮನೆಗಳು ದೊರೆಯುತ್ತವೆ**
ತರಳಬಾಳು ಬಡಾವಣೆಯಲ್ಲಿ ಅಪಾರ್ಟ್‌ಮೆಂಟ್‌ನಲ್ಲಿ 2 ಬೆಡ್ ರೂಮ್, 3 ಬೆಡ್ ರೂಮ್ ಮನೆಗಳು ಬಾಡಿಗೆಗೆ ದೊರೆಯುತ್ತವೆ.
ದಕ್ಷಿತ್ ಐನಳ್ಳಿ ಏಜೆಂಟ್
99166 68228

**WANTED**
CIVIL ENGINEERS
Freshers and 3-4 years Experienced, Building Projects at Bangalore
80880 50729
89711 03671

**Required**
Lady candidate for Office work & Accountant / GST
Good English communication with computer knowledge.
P J Extension, Davangere.
99006 66122

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಸಾಯಿ ಫೈನಾನ್ಸ್ (ರಿ)
ಫುಲ್ ಟೈಂ/ಪಾರ್ಟ್ ಟೈಂ
ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
ಆಸಕ್ತಿಯುಳ್ಳವರು ಸಂಪರ್ಕಿಸಿ :
96860 22969

**TUITIONS**
Class 1-10
(State/CBSE / ICSE / IGCSE / Olympiad
PU 1-2 (PCMB)
Supplementary
98444 92888

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಜಮೀನು ಮಾರಾಟಕ್ಕೆ ಇದೆ**
1 ಎಕರೆ 0.3 ಗುಂಟೆ ಖಾಲಿ ಜಮೀನು, ದಾವಣಗೆರೆ.
ನೀಲಾನಹಳ್ಳಿ ಗ್ರಾಮ
97396 37553

**ಬೇಕಾಗಿದ್ದಾರೆ**
ಅಡುಗೆ, ರೊಟ್ಟಿ, ಚಪಾತಿ ಮಾಡಲು ಬರುವ ಅನುಭವವುಳ್ಳ ಮಹಿಳೆ ಬೇಕಾಗಿದ್ದಾರೆ.
63638 85792
63647 29758

**ಅಧಿಕೃತ ಚೀಟಿ ಸಂಸ್ಥೆ**
ರೂ. 5 ಲಕ್ಷ ಚೀಟಿ ಪ್ರಾರಂಭ 50 ಸದಸ್ಯರು 6,500/- ರಿಂದ 10,000 /- ರೂ ವರೆಗೆ,
ಸ್ಕಂದ ಚಿಟ್ ಫಂಡ್ಸ್- (ರಿ)
ದಾವಣಗೆರೆ.
78997 75159

## ಶ್ರೀ ರೇಣುಕಾಚಾರ್ಯರ ಭಾವಚಿತ್ರದ ಸಾರೋಟ ಉತ್ಸವ



ದಾವಣಗೆರೆ, ಮಾ.12- ಶ್ರೀ ಆದಿ ಜಗದ್ಗುರು ಶ್ರೀ ಮದ್ವೀರಶೈವ ಮಹಾಮತ ಸ್ಥಾಪನಾಚಾರ್ಯರಾದ ಶ್ರೀ ಆದಿ ಜಗದ್ಗುರು ರೇಣುಕಾಚಾರ್ಯರ ಜಯಂತಿ ಹಿನ್ನೆಲೆಯಲ್ಲಿ ಶ್ರೀ ರೇಣುಕಾಚಾರ್ಯರ ಭಾವಚಿತ್ರದ ಸಾರೋಟ ಉತ್ಸವವು ಶ್ರೀ ಶೈಲ ಮಠದಿಂದ ರೇಣುಕಾ ಮಂದಿರದವರೆಗೆ ನಡೆಯಿತು.



# 'ಬಿ' ಖಾತಾ ನೆಪದಲ್ಲಿ ಬಡ ಜನರ ಲೂಟಿಗಿಳಿದ ಸರ್ಕಾರ

### ನಗರ ಪಾಲಿಕೆ ಬಿಜೆಪಿ ಮಾಜಿ ಸದಸ್ಯರ ಆರೋಪ

ದಾವಣಗೆರೆ, ಮಾ.12- ಕಂದಾಯ ನಿವೇಶನ ಅಥವಾ ಕಟ್ಟಡಕ್ಕೆ 'ಬಿ' ಖಾತಾ ನೀಡುತ್ತೇವೆ ಎಂದು ಬಡ ಜನರಿಗೆ ದುಪ್ಪಟ್ಟು ತೆರಿಗೆ ವಿಧಿಸಿ ಮೂರ್ಖರನ್ನಾಗಿಸುವ ಯೋಜನೆಯನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದು ಅನ್ಯಾಯ ಎಸಗುತ್ತಿದೆ ಎಂದು ಮಹಾನಗರ ಪಾಲಿಕೆ ಸದಸ್ಯ ಕೆ. ಪ್ರಸನ್ನಕುಮಾರ್ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಂದಾಯ ನಿವೇಶನಗಳನ್ನು 'ಬಿ'ಖಾತಾ ರಿಜಿಸ್ಟ್ರನಲ್ಲಿ ನಮೂದಿಸಿ ನಮೂನೆ- 2 ಎ ಅಥವಾ ನಮೂನೆ- 3 ಎ ನೀಡುತ್ತಿದ್ದು, ಇದರಲ್ಲಿ ಸೊತ್ತಿನ ವರ್ಗೀಕರಣ ಕಾಲಂನಲ್ಲಿ ಅನಧಿಕೃತ ಎಂದು ನಮೂದಿಸ ಲಾಗುತ್ತಿದೆ. ಇದರಿಂದ ಇ-ಆಸ್ತಿಗಳಿಗೆ ಕಟ್ಟಡ ಪರವಾನಿಗೆಯಾಗಲೀ, ಬ್ಯಾಂಕ್ ಲೋನ್‌ಗಳಾಗಲೀ ನೀಡುವುದಿಲ್ಲ. ಕೇವಲ ರಾಜ್ಯ ಸರ್ಕಾರ ತನ್ನ ಖಾಲಿಯಾಗಿರುವ ಖಜಾನೆಯನ್ನು ತುಂಬಿಸಿಕೊಳ್ಳಲು 'ಬಿ' ಖಾತಾ ಹೆಸರಿನಲ್ಲಿ ಬಡ ಜನರಿಗೆ ದುಪ್ಪಟ್ಟು ತೆರಿಗೆ ವಸೂಲಿ ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಡವರಿಗೆ ಅನುಕೂಲ ಮಾಡುತ್ತೇವೆ ಎಂದು ಸುಳ್ಳು ಭರವಸೆ ನೀಡಿ, ಅವರಿಗೆ ಪ್ರತಿ ವರ್ಷ ತೆರಿಗೆಯ ಹೊರೆಷಹೊರಿಸಿ, ಇ-ಆಸ್ತಿಗಳನ್ನು ಅಧಿಕೃತಗೊಳಿಸದೇ ಬಡ ಜನರಿಂದ ಲೂಟಿ ಮಾಡುವ ಹುನ್ನಾರ ರಾಜ್ಯ ಸರ್ಕಾರದ್ದು ಎಂದು ಆರೋಪಿಸಿದರು.

ರಾಜ್ಯದ ಬಡ ಜನರಿಗೆ ತಮ್ಮ ಕಂದಾಯ ನಿವೇಶನ ಮತ್ತು ಕಟ್ಟಡಗಳನ್ನು ನಮೂನೆ-2 ಎ ಅಥವಾ ನಮೂನೆ-3 ಎ ನೀಡಿದಲ್ಲಿ ಸಕ್ರಮಗೊಳಿಸಿ ದಂತಾಗುವುದಿಲ್ಲ ಎಂದು ಆದೇಶ ಸ್ಪಷ್ಟವಾಗಿ ಹೇಳುತ್ತದೆ ಎಂದರು.

ಈಗ ದುಪ್ಪಟ್ಟು ತೆರಿಗೆ ಪಾವತಿಸಿ 'ಬಿ' ಖಾತಾ ನಮೂನೆ-2ಎ ಅಥವಾ ನಮೂನೆ-3 ಎ ಪಡೆದ ನಿವೇಶನದಾರರಿಗೆ ಕಟ್ಟಡ ಪರವಾನಿಗೆ ನೀಡಲು ಆಗುವುದಿಲ್ಲ ಎಂದು ಅಧಿಕಾರಿಗಳು ತಿಳಿಸುತ್ತಿದ್ದಾರೆ. ಕಾರಣ ರಾಜ್ಯ ಸರ್ಕಾರದ ಆದೇಶದಲ್ಲಿ ಬಡವರಿಗೆ ನೆರವಾಗುವ ಬದಲು ಕಂದಾಯ ನಿವೇಶನಗಳನ್ನು ಅನಧಿಕೃತ ಆಸ್ತಿಗಳನ್ನು ಪ್ರತ್ಯೇಕ 'ಬಿ' ರಿಜಿಸ್ಟ್ರನಲ್ಲಿ ನಮೂದಿಸಿ ತೆರಿಗೆ ವ್ಯಾಪ್ತಿಗೆ ಒಳಪಡಿಸಲು ಮಾತ್ರ ತಿದ್ದುಪಡಿ ತಂದಿದ್ದು ಮತ್ತು ಅನಧಿಕೃತ ಆಸ್ತಿ ಎಂದು ಇ-ಖಾತಾ ನೀಡಿ ಆಸ್ತಿಯನ್ನು ಸಕ್ರಮಗೊಳಿಸದೇ ಜನರಿಗೆ ರಾಜ್ಯ ಸರ್ಕಾರ ಅನ್ಯಾಯವೆಸಗುತ್ತಿದೆ ಎಂದು ಕಿಡಿಕಾರಿದರು.

ಮಾಜಿ ಮೇಯರ್ ಎಸ್.ಟಿ.ವೀರೇಶ್ ಮಾತನಾಡಿ, ತಮ್ಮ ಆಸ್ತಿ ಉಳಿಸಿಕೊಳ್ಳಲು ಜನತೆ ತಮ್ಮ ಆಸ್ತಿಗಳನ್ನು ಬಿ ಖಾತಾ ಮಾಡಿಸಿಕೊಳ್ಳಲು ಮುಂದಾಗುತ್ತಿದ್ದಾರೆ. ಆದರೆ ಇದರಿಂದ ಸಾರ್ವಜನಿಕವಾಗಿ ಅನುಕೂಲ ಆಗುತ್ತಿಲ್ಲ. ಕಾರಣ ಈ ಕೂಡಲೇ ರಾಜ್ಯ ಸರ್ಕಾರ ನಮೂನೆ-2 ಎ ಮತ್ತು ನಮೂನೆ-3 ಎ ರಲ್ಲಿ ಆಸ್ತಿ ವರ್ಗೀಕರಣ ಕಾಲಂನಲ್ಲಿ 'ಅಧಿಕೃತ' ಎಂದು ನಮೂದಿಸಬೇಕು. ಈ ನಿವೇಶನಗಳಿಗೆ ಕಟ್ಟಡ ಪರವಾನಿಗೆ ನೀಡಲು ಅಗತ್ಯ ತಿದ್ದುಪಡಿ ತರಬೇಕು. ಅದಲ್ಲದೇ ಬ್ಯಾಂಕುಗಳಿಗೆ ಮನೆ ಕಟ್ಟಲು ಸಾಲ ನೀಡಲು ಈ ನಿವೇಶನಗಳು ಅಧಿಕೃತ ಎಂದು ಆದೇಶಿಸಬೇಕು. ಇಲ್ಲವಾದಲ್ಲಿ ಜನರನ್ನು ದಾರಿ ತಪ್ಪಿಸಿ ತೆರಿಗೆ ಸಂಗ್ರಹಿಸುವ ಈ 'ಬಿ' ಖಾತಾ ಆಂದೋಲನವನ್ನು ಕೈಬಿಡಬೇಕು ಎಂದು ಒತ್ತಾಯಿಸಿದರು.

'ಬಿ' ಖಾತಾ ನೀಡಲು ಜನರು ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ಕೇವಲ ನೋಂದಾಯಿತ ಮಾರಾಟ ಪತ್ರ, ದಾನ ಪತ್ರ, ವಿಭಾಗ ಪತ್ರ ಕೇಳಬೇಕು. ಆದರೆ ಪಾಲಿಕೆಯಲ್ಲಿ ಇಲ್ಲಸಲ್ಲದ ದಾಖಲೆಗಳನ್ನು ಕೇಳಿ ಒಂದು ಅರ್ಜಿಗೆ 10 ರಿಂದ 15 ಸಾವಿರ ರೂ.ಗಳನ್ನು ವಸೂಲಿ ಮಾಡುವ ವ್ಯವಸ್ಥೆ ನಿರ್ಮಾಣವಾಗಿದೆ. ಕೂಡಲೇ ಜಿಲ್ಲಾಧಿಕಾರಿಗಳು ಲಂಚಾವ ತಾರಕ್ಕೆ ಕಡಿವಾಣ ಹಾಕಬೇಕೆಂದು ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಶಿವಾನಂದ್, ಸುರೇಶ್, ಜಯಪ್ರಕಾಶ್, ಲಿಂಗರಾಜ್ ಉಪಸ್ಥಿತರಿದ್ದರು.

## ರೇಣುಕಾಗೆ ಅಕ್ಕ ಪ್ರಶಸ್ತಿ



ಹರಿಹರ, ಮಾ. 12- ತಾಲ್ಲೂಕಿನ ಹೊಳೆ ಸಿರಿಗೆರೆ ಜಿಹೆಚ್‌ಪಿಎಸ್ ಶಾಲೆಯ ಶಿಕ್ಷಕಿ ಶ್ರೀಮತಿ ಕೆ.ಎಂ. ರೇಣುಕಾ ಅವರಿಗೆ ಬೆಂಗಳೂರಿನ ಸಂಸ್ಥೆ ಅಕ್ಕನ ಮನೆ ಪ್ರತಿಷ್ಠಾನದಿಂದ ಅಕ್ಕ - 2025 ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ರೇಣುಕಾ ಅವರ ಸುಮಾರು 20 ವರ್ಷಗಳ ಶಿಕ್ಷಣ ಮತ್ತು ಸಾಹಿತ್ಯ ಸೇವೆಯನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗಿದೆ.

## ಬಾಬಾ ಬುಡನ್ ಗಿರಿಯಲ್ಲಿ 15 ರಂದು ಸಂದಲ್ - ಉರುಸ್

ದಾವಣಗೆರೆ, ಮಾ. 12 - ಚಿಕ್ಕಮಗಳೂರು ಜಿಲ್ಲೆಯ ಬಾಬಾಬುಡನ್ ಗಿರಿಯಲ್ಲಿರುವ ಹಜರತ್ ದಾದಾ ಹಯಾತ್ ಮೀರ್ ಖಲಂದರ್ ಬಾಬಾರವರ ಸಂದಲ್ ಮಾರ್ಚ್ 15 ರಂದು ಹಮ್ಮಿಕೊಂಡಿದ್ದು ಗಂಧ ಲೇಪಿಸಿ-ಗಲೀಫ್ ಅರ್ಪಿಸಲಾಗುವುದು, ದರ್ಗಾದಲ್ಲಿ ಫಾತೇಹಾ ಖ್ವಾನಿ ಜರುಗಲಿದೆ.

ದಿ. 16 ರಂದು ಭಾನುವಾರ ಉರುಸ್ ಆಚರಣೆ, ದಿ.17 ರಂದು ಸೋಮವಾರ ಜನ್ನತ್ ನಗರದಲ್ಲಿರುವ ಸೈಯದ್ ಮಲ್ಲಿಕ್ ಕಬೀರ್ ಜಿನ್ನಾರ್ ಷಹೀದ್, ಸೈಯದ್ ಮಲ್ಲಿಕ್ ಕಬೀರ್ ಸುನ್ನಾರ್ ಷಹೀದ್ (ರ.ಅ.)ಅವರ ಸಂದಲ್ ಹಮ್ಮಿಕೊಳ್ಳಲಾಗಿದೆ ಎಂದು ಸಜ್ಜಾದ ನಷೀನ್ ಸೈಯದ್ ಗೌಸ್ ಮೊಹಿ ಯುದ್ದೀನ್ ಶಾ ಖಾದ್ರಿ ತಿಳಿಸಿದ್ದಾರೆ. ರಂಜಾನ್ ತಿಂಗಳು ಉಪವಾಸ ಆಚರಣೆ ನಿಮಿತ್ತ ಬೇಗನೆ ಕಾರ್ಯಕ್ರಮಗಳು ನಡೆಯಲಿವೆ.

## ತಿಪ್ಪೇರುದ್ರಸ್ವಾಮಿ ರಥೋತ್ಸವಕ್ಕೆ ಬಸ್

ದಾವಣಗೆರೆ, ಮಾ. 12 - ಇದೇ ದಿನಾಂಕ 15 ರಿಂದ 17 ರವರೆಗೆ ಚಳ್ಳಕೆರೆ ತಾಲ್ಲೂಕು ನಾಯಕನಹಟ್ಟಿಯಲ್ಲಿ ನಡೆಯುವ ಶ್ರೀ ಗುರು ತಿಪ್ಪೇರುದ್ರಸ್ವಾಮಿ ರಥೋತ್ಸವಕ್ಕೆ ರಾಜ್ಯ ರಸ್ತೆ ಸಾರಿಗೆ ನಿಗಮ, ದಾವಣಗೆರೆ ವಿಭಾಗದ ಘಟಕಗಳಿಂದ ಭಕ್ತಾದಿಗಳ ಅನುಕೂಲಕ್ಕಾಗಿ 65 ಬಸ್‌ಗಳು ಕಾರ್ಯಚರಣೆ ಮಾಡಲಿವೆ ಎಂದು ವಿಭಾಗೀಯ ನಿಯಂತ್ರಣಾಧಿಕಾರಿ ಕಿರಣಕುಮಾರ ಎಫ್. ಬಸಾಪುರ ತಿಳಿಸಿದ್ದಾರೆ.

## ಹುಬ್ಬಳ್ಳಿ-ಚಿತ್ರದುರ್ಗ-ಹುಬ್ಬಳ್ಳಿ ಎಕ್ಸ್ ಪ್ರೆಸ್ ರೈಲು ಸಂಚಾರ ಭಾಗಶಃ ರದ್ದತಿ ಮುಂದುವರಿಕೆ

ದಾವಣಗೆರೆ, ಮಾ. 12- ಪ್ರಯಾಣಿಕರ ಕೊರತೆಯಿಂದಾಗಿ, ರೈಲು ಸಂಖ್ಯೆ 17347/17348 ಎಸ್.ಎಸ್.ಎಸ್ ಹುಬ್ಬಳ್ಳಿ-ಚಿತ್ರದುರ್ಗ-ಎಸ್.ಎಸ್.ಎಸ್ ಹುಬ್ಬಳ್ಳಿ ದೈನಂದಿನ ಎಕ್ಸ್‌ಪ್ರೆಸ್ ರೈಲಿನ ಸಂಚಾರವನ್ನು ಚಿಕ್ಕಜಾಜೂರು ಮತ್ತು ಚಿತ್ರದುರ್ಗದ ನಡುವಿನ ಭಾಗಶಃ ರದ್ದತಿಯನ್ನು ಜೂನ್ 30, 2025 ರವರೆಗೆ ವಿಸ್ತರಿಸಲಾಗಿದೆ. ಈ ಹಿಂದೆ ಮಾರ್ಚ್ 31, 2025 ರವರೆಗೆ ಮಾತ್ರ ಭಾಗಶಃ ರದ್ದತಿ ಇತ್ತು, ಆದರೆ ಈಗ ಅದನ್ನು ಏಪ್ರಿಲ್ 1, 2025 ರಿಂದ ಜೂನ್ 30, 2025 ರವರೆಗೆ ವಿಸ್ತರಿಸಲಾಗಿದೆ.

ಹುಬ್ಬಳ್ಳಿಯಿಂದ ಹೊರಡುವ ರೈಲು (ರೈ.ಸಂ.17347) ಚಿಕ್ಕಜಾಜೂರಿನಲ್ಲೇ ತನ್ನ ಪ್ರಯಾಣವನ್ನು ಅಂತ್ಯಗೊಳಿಸಲಿದೆ. ಹಾಗೆಯೇ, ಚಿತ್ರದುರ್ಗದಿಂದ ಹುಬ್ಬಳ್ಳಿಗೆ ತೆರಳುವ ರೈಲು (ರೈ.ಸಂ.17348) ಚಿಕ್ಕಜಾಜೂರಿನಿಂದಲೇ ಪ್ರಯಾಣ ಆರಂಭಿಸಲಿದೆ. ಇದರಿಂದಾಗಿ, ಚಿಕ್ಕಜಾಜೂರು ಮತ್ತು ಚಿತ್ರದುರ್ಗದ ನಡುವಿನ ರೈಲು ಸಂಚಾರವು ಸಂಪೂರ್ಣ ರದ್ದಾಗುತ್ತದೆ.

## ಮಾಜಿ ಪುರಸಭೆ ಪ.ಪೂ.ಕಾಲೇಜಿಗೆ ಹಳೆಯ ವಿದ್ಯಾರ್ಥಿಯಿಂದ 2 ಲಕ್ಷ ದೇಣಿಗೆ

ದಾವಣಗೆರೆ, ಮಾ.12- ನಗರದ ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿನ ನಿವೃತ್ತ ಉಪನ್ಯಾಸಕ ಎ.ಹೆಚ್.ಗುರುಮೂರ್ತಿ ಅವರು ತಾವು ಓದಿದ ಸರ್ಕಾರಿ (ಮಾಜಿ ಪುರಸಭೆ) ಪದವಿ ಪೂರ್ವ ಕಾಲೇಜಿಗೆ ಎರಡು ಲಕ್ಷ ರೂ. ಗಳ ದೇಣಿಗೆ ನೀಡಿದ್ದಾರೆ.

ಈ ಹಣವನ್ನು ಎಸ್‌ಬಿಐ ಮಂಡಿಪೇಟೆ ಶಾಖೆಯಲ್ಲಿ ನಿಶ್ಚಿತ ಠೇವಣಿ ಇಡಲಾಗಿದ್ದು, ಈ ಹಣದಿಂದ ಬರುವ ಬಡ್ಡಿಯಲ್ಲಿ ಪ್ರತಿ ವರ್ಷ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದು ಕಾಲೇಜಿ ಪ್ರಕಟಣೆ ತಿಳಿಸಿದೆ.

## ಹಣದುಬ್ಬರ ಶೇ.4ಕ್ಕಿಂತ ಕಡಿಮೆ : ಕುಸಿತ

(1ನೇ ಪುಟದಿಂದ) ಚಿಲ್ಲರೆ ಹಣದುಬ್ಬರ ದರ ಶೇಕಡ 5.09 ಆಗಿತ್ತು.

ಜನವರಿ ತಿಂಗಳಲ್ಲಿ ಕೈಗಾರಿಕಾ ಬೆಳವಣಿಗೆ ಶೇ.5ರ ಹಂತಕ್ಕೆ ತಲುಪಿದೆ. ಉತ್ಪಾದನಾ ಚಟುವಟಿಕೆ ಹೆಚ್ಚಳವಾಗಿರುವ ಕಾರಣ ಈ ಬೆಳವಣಿಗೆಯಾಗಿದೆ.

# ಭ್ರಷ್ಟ ಅಧಿಕಾರಿಗಳ ವರ್ಗಾವಣೆಗೆ ಆಗ್ರಹ



ದಾವಣಗೆರೆ, ಮಾ. 12 - ಆರ್‌ಟಿಓ ಕಚೇರಿಯಲ್ಲಿ ಸುಮಾರು ಹದಿನೈದು ವರ್ಷಗಳಿಂದ ಕೆಲಸ ಮಾಡುತ್ತಿರುವ ಮೂವರನ್ನು ವರ್ಗಾವಣೆ ಮಾಡುವಂತೆ ಒತ್ತಾಯಿಸಿ ಶ್ರೀರಾಮ ಸೇನೆ ಕಾರ್ಯಕರ್ತರು ಆರ್‌ಟಿಓ ಕಚೇರಿ ಮುಂಭಾಗದಲ್ಲಿ ನಿನ್ನೆ ಪ್ರತಿಭಟನೆ ನಡೆಸಿದರು.

ಇದೇ ವೇಳೆ ಮಾತನಾಡಿದ ಶ್ರೀರಾಮ ಸೇನೆ ಜಿಲ್ಲಾಧ್ಯಕ್ಷ ಕೆ.ಮಣಿ ಸರ್ಕಾರ್ ಅವರು, ಸಿ.ಎಸ್. ಪ್ರಮುತೇಶ್, ಮೊಹಮ್ಮದ್ ಖಾಲಿದ್, ಎಸ್.ಟಿ. ಸತೀಶ್ ಮೂವರನ್ನು ವರ್ಗಾಯಿಸುವಂತೆ ಅವರು ಒತ್ತಾಯಿಸಿದರು.

ಈ ಅಧಿಕಾರಿಗಳ ಮೇಲೆ ಕರ್ನಾಟಕ ಲೋಕಾಯುಕ್ತದಲ್ಲಿ ಪ್ರಕರಣ ದಾಖಲಾಗಿದ್ದರೂ ಸಹ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ. ಇದರಿಂದ ಭ್ರಷ್ಟಾಚಾರಕ್ಕೆ ಕುಮ್ಮಕ್ಕು ನೀಡುತ್ತಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ ಎಂದು ಅವರು ಆರೋಪಿಸಿದರು.

ಪ್ರತಿಭಟನೆಯಲ್ಲಿ ಶ್ರೀರಾಮ ಸೇನೆಯ ಪರಶುರಾಮ ನಡುಮನಿ, ಪಿ. ಸಾಗರ್, ರಾಹುಲ್, ಶ್ರೀಧರ್, ಅನಿಲ್ ಸುರ್ವೆ, ರಾಜು ದೊಡ್ಡಮನಿ, ವಿನೋದ ರಾಜ್, ಶಿವು ಪೂಜಾರ್, ರಾಘು, ಅವಿನಾಶ್, ಮಧು, ಮಂಜು, ಶ್ರೀಕಾಂತ್, ಶಶಿ, ಸುನೀಲ್, ರುದ್ರೇಶ, ಚಂದ್ರು, ಅಜಯ್ ಭಾಗವಹಿಸಿದ್ದರು.

# ಆರ್‌ಟಿಓ ಕಚೇರಿಯಲ್ಲಿ ಭ್ರಷ್ಟಾಚಾರ ನಡೆದಿಲ್ಲ

ದಾವಣಗೆರೆ, ಮಾ. 12- ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಭಷ್ಟಾಚಾರ ನಡೆಯುತ್ತಿದೆ ಎಂದು ಕೆಲವರು ಆರೋಪ ಮಾಡಿ, ಅಧಿಕಾರಿ ಗಳ ವರ್ಗಾವಣೆಗೆ ಪ್ರತಿಭಟನೆಗೆ ಒತ್ತಾಯಿಸಿ ದ್ದಾರೆ. ಆದರೆ ಇಲಾಖೆಯಲ್ಲಿ ಯಾವುದೇ ಭ್ರಷ್ಟಾಚಾರ ನಡೆದಿಲ್ಲ ಎಂದು ಜಿಲ್ಲಾ ಲಾರಿ ಮಾಲೀಕರು ಹಾಗೂ ಟ್ರಾನ್ಸ್‌ಪೋರ್ಟ್ ಏಜೆಂಟ್ಸ್ ಅಸೋಸಿಯೇಷನ್ ಅಧ್ಯಕ್ಷ ಸೈಯದ್ ಸೈಫುಲ್ಲಾ ಸ್ಪಷ್ಟನೆ ನೀಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾರಿಗೆ ಇಲಾಖೆಯಲ್ಲಿ ಸಿಬ್ಬಂದಿ ಕೊರತೆಯಿದ್ದು, ಅದರಲ್ಲೂ ದಾವಣಗೆರೆ ಪ್ರಾದೇಶಿಕ ಸಾರಿಗೆ ಅಧಿಕಾರಿ ಕಚೇರಿಯಲ್ಲಿ ಮೋಟಾರು ವಾಹನ ನಿರೀಕ್ಷಕರು ಕರ್ತವ್ಯ ನಿರ್ವಹಿಸಲು ಹಿಂದೇಟು ಹಾಕುತ್ತಿರುವಾಗ ಇರುವ ಅಧಿಕಾರಿಗಳನ್ನೇ ವರ್ಗಾವಣೆ ಮಾಡಿದರೆ ಸಾರ್ವಜನಿಕರಿಗೆ ತೊಂದರೆಯಗುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದರು.

ಇತ್ತೀಚಿನ ದಿನಗಳಲ್ಲಿ ವಾಹನ 4 ತಂತ್ರಾಂಶ ಅಳವಡಿಸಿರುವುದರಿಂದ ಅದಕ್ಕೆ ಹೊಂದಿಕೊಳ್ಳಲು ಸ್ವಲ್ಪ ಸಮಯ ಬೇಕಾಗುತ್ತದೆ. ಇದರಿಂದ ಸಣ್ಣ ಪುಟ್ಟ ಕೆಲಸಗಳು ವಿಳಂಬವಾಗುತ್ತಿದ್ದು, ಅದಕ್ಕೆ ಸಿಬ್ಬಂದಿ ವರ್ಗ ಕಾರಣವಲ್ಲ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಕೆ.ಎಸ್. ಮಲ್ಲೇಶಪ್ಪ, ಎಂ.ಆರ್. ಸತೀಶ್, ಜಿಲಾನ್ ಬೇಗ್, ಎಸ್. ಬಸವರಾಜ್, ಈಶ್ವರ್, ಬಿ. ಹೆಚ್. ಭೀಮಪ್ಪ ಮತ್ತಿತರರಿದ್ದರು.

## ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಳೆ ಹೋಳಿ ಹುಣ್ಣಿಮೆ



ದಾವಣಗೆರೆ, ಮಾ. 12 - ನಗರದ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 14ರ ಶುಕ್ರವಾರ ಹುಣ್ಣಿಮೆ ಪ್ರಯುಕ್ತ ಶ್ರೀ ಸತ್ಯ ನಾರಾಯಣ ಸ್ವಾಮಿ ಪೂಜಾ ಕಥಾ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

ಶ್ರೀಮತಿ ಶಶಿಕಲಾ ಎಂ.ಡಿ ಮತ್ತು ವಿಜಯಕುಮಾರ್ ಅಂಗಡಿ ಹಾಗೂ ಸಹ ಕುಟುಂಬದವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

## ಕುರಿ, ಮೇಕೆ ಸಾಕಾಣಿಕೆ ತರಬೇತಿ

ದಾವಣಗೆರೆ, ಮಾ. 12 -ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಆಧುನಿಕ ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿಯನ್ನು ನಾಡಿದ್ದು ದಿನಾಂಕ 14 ಮತ್ತು 15 ರಂದು ಆಯೋಜಿಸಲಾಗಿದೆ. ವಿವರಕ್ಕೆ ಸಂಪರ್ಕಿಸು ವ ದೂರವಾಣಿ ಸಂಖ್ಯೆ 08192-233787.


**CHANGE OF NAME**

I kavya alias Kavya K alias Sujatha H.N. W/o (late) Kumar Hullera (D/o Nagappa H) Date of Birth : 12.09.1997) Age : 27 years R/o Kokkanuru Village, Harihara Taluk, Davanagere Dt. I submit that in my School records my name is appeared as Sujatha H.N. D/o Nagappa H & mother name Lalithamma. At the time of my marriage with Kumar Hullera, due to matching of Horoscope, my husband's family members changed my name as Kavya. And the same is continued in my Aadhaar Card No. 7930 6532 5449 In my PAN Card my name is appeared as Kavya. I am having bank Account with Canara Bank, Harihara Branch vide SB A/c No. 110196654320, where in my name is appeared as Kavya and I signed as Kavya K. The letter `K' stands for my husband name Kumar. Hence I hereby declare that, the name appeared in my school records, And after the marraige my name appeared in my Aadhaar card, PAN Card and Bank Account as Kavya are one and the same and belongs to me. For clarifications of my name as appeared above, I am swearing this affidavit. This affidavit is required me to produce before the concerned authoriy. In case if any disputes arises in the matter, I bind myself for all future legal consequences. deponent - **KAVYA K.**


# ಕರ್ನಾಟಕದಲ್ಲಿ ಅಡಿಕೆ ಮಂಡಳಿ ಸ್ಥಾಪಿಸಲು ಕೇಂದ್ರ ಸರ್ಕಾರಕ್ಕೆ ಒತ್ತಾಯ

ದಾವಣಗೆರೆ, ಮಾ. 12 - ಅಡಿಕೆ ಬೆಳೆಗಾರರ ದೀರ್ಘಕಾಲಿಕ ಹಿತಕ್ಕಾಗಿ ಬೆಲೆ ಸ್ಥಿರತೆ, ಸಂಶೋಧನೆ, ವಿಸ್ತರಣೆ ಹಾಗೂ ಮಾರುಕಟ್ಟೆ ಸೌಲಭ್ಯಗಳನ್ನು ಒದಗಿಸಲು ಬಿಹಾರದಲ್ಲಿರುವ ಮಖಾನಾ ಮಂಡಳಿ ಮಾದರಿಯಲ್ಲಿ 'ಅಡಿಕೆ ಮಂಡಳಿ' ಸ್ಥಾಪಿಸಬೇಕು ಎಂದು ನವದೆಹಲಿಯ ಸಂಸತ್ ಅಧಿವೇಶನದಲ್ಲಿ ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿದರು.

ಸದನದ ಪ್ರಶ್ನೋತ್ತರ ವೇಳೆಯಲ್ಲಿ ಕರ್ನಾಟಕದಲ್ಲಿ ಅತ್ಯಾವಶ್ಯಕವಾಗಿರುವ ಅಡಿಕೆ ಮಂಡಳಿ ಸ್ಥಾಪನೆಯ ಬಗ್ಗೆ ಗಮನ ಸೆಳೆದ ಸಂಸದರು, ಕರ್ನಾಟಕ ಅಡಿಕೆ ಬೆಳೆ ಬೆಳೆಯುತ್ತಿರುವ ಪ್ರಮುಖ ರಾಜ್ಯವಾಗಿದ್ದು, ದೇಶದ ಒಟ್ಟು ಉತ್ಪಾದನೆಯಲ್ಲಿ ಶೇ. 40ಕ್ಕಿಂತ ಹೆಚ್ಚು ಕೊಡುಗೆ ನೀಡುತ್ತಿದೆ. ಈ ಬೆಳೆಯನ್ನು ರಾಜ್ಯದ 15ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿದೆ ಎಂದು ಹೇಳಿದರು.



ತಾನು ಪ್ರತಿನಿಧಿಸುವ ಲೋಕಸಭಾ ಕ್ಷೇತ್ರವಾಗಿರುವ ದಾವಣಗೆರೆಯಲ್ಲಿಯೂ ಸಹ ವ್ಯಾಪಕವಾಗಿ ಬೆಳೆಸಲಾಗುತ್ತಿದೆ. ಹಿಂದಿ ನಿಂದಲೂ ಕರಾವಳಿ, ಮಲೆನಾಡು ಹಾಗೂ ಅರೆ ಮಲೆನಾಡು ಪ್ರದೇಶಗಳಲ್ಲಿ ಬೆಳೆಸಲಾಗುತ್ತಿರುವ ಅಡಿಕೆ ಈಗ ಸಮತಟ್ಟು ಪ್ರದೇಶಗಳಿಗೂ ವಿಸ್ತರಿಸಿದೆ. ಸುಮಾರು ಹತ್ತು ಲಕ್ಷಕ್ಕೂ ಹೆಚ್ಚು ಕುಟುಂಬಗಳು ಈ ಬೆಳೆಯೊಂದಿಗೆ ನೇರವಾಗಿ ಮತ್ತು ಪರೋಕ್ಷವಾಗಿ ಜೀವನ ನಿರ್ವಹಿಸುತ್ತಿದ್ದಾರೆ ಎಂದು ಮನವರಿಕೆ ಮಾಡಿಕೊಟ್ಟರು. ಆದರೆ ಇತ್ತೀಚಿನ ದಿನಗಳಲ್ಲಿ ಅಡಿಕೆ ಬೆಳೆಗಾರರು ಹಲವಾರು ಕಷ್ಟಗಳನ್ನು ಎದುರಿಸುತ್ತಿದ್ದಾರೆ. ಅಡಿಕೆ ಬೆಳೆಯು ಬೇರು ಕೊಳೆರೋಗ, ಹಳದಿ ಎಲೆ ಚುಕ್ಕಿ ಇತ್ಯಾದಿ ರೋಗಗಳಿಗೆ ತುತ್ತಾಗುತ್ತಿದೆ ಹಾಗೂ ಬೆಳೆಯ ಉತ್ಪಾದನೆಗೆ ತೀವ್ರ ಪರಿಣಾಮ ಬೀರುತ್ತಿದೆ.

ಇದಲ್ಲದೇ, ವಿದೇಶಗಳಿಂದ ಅಕ್ರಮವಾಗಿ ಅಡಿಕೆ ಆಮದು ಆಗುತ್ತಿರುವುದರಿಂದ ಬೆಲೆ ಕುಸಿತ ಸಂಭವಿಸಿದ್ದು, ರೈತರು ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿದ್ದಾರೆ. ಬೆಲೆ ಸ್ಥಿರತೆ ಇಲ್ಲದಿರುವುದು ಹಾಗೂ ನಿಯಂತ್ರಣದ ಕೊರತೆಯಿಂದಾಗಿ ರೈತರು ಮಾರುಕಟ್ಟೆಯ ಅಸ್ಥಿರತೆ ಎದುರಿಸುತ್ತಿದ್ದಾರೆ ಎಂದು ಪ್ರಭಾ ಅವರು ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟರು.

ಕೃಷಿ ಮತ್ತು ಕೃಷಿಕರ ಕಲ್ಯಾಣ ಸಚಿವಾಲಯ ಅಡಿಕೆ ಬೆಲೆಗೆ ನಿಯಂತ್ರಣ ಒದಗಿಸಬೇಕು, ಆಮದು ಶುಲ್ಕ ಹೆಚ್ಚಿಸಬೇಕು ಮತ್ತು ಅಕ್ರಮ ಆಮದುಗಳನ್ನು ತಡೆಯ ಬೇಕು. ಜೊತೆಗೆ, ಅಡಿಕೆ ಬೆಳೆಗಾರರ ದೀರ್ಘಕಾಲಿಕ ಹಿತಕ್ಕಾಗಿ ಬೆಲೆ ಸ್ಥಿರತೆ, ಸಂಶೋಧನೆ, ವಿಸ್ತರಣೆ ಹಾಗೂ ಮಾರುಕಟ್ಟೆ ಸೌಲಭ್ಯಗಳನ್ನು ಒದಗಿಸಲು ಕರ್ನಾಟಕದ ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ'ಅಡಿಕೆ ಮಂಡಳಿ' ಸ್ಥಾಪಿಸಬೇಕು ಎಂದು ಒತ್ತಾಯಿಸುವ ಮೂಲಕ ಅಡಿಕೆ ಬೆಳೆಗಾರರ ಹಿತ ಕಾಪಾಡಲು ಸದಾ ಸಿದ್ದ ಎಂದು ಸಂಸದರು ಸದನದ ಗಮನ ಸೆಳೆದರು.


**In The Court of The Principal District and Session Judge and Commercial Court At Davangere.**

**Com O.S. No. 62 of 2024**

Plaintiff : **Canara Bank, Saraswathinagara Branch** -Vs- Defendant : **M/s Sri Sai Luxury Furniture**

Defendants : M/s Sri Sai Luxury Furniture Represented by Partners : 1) Sri Girish Babu s/o Radhakrishna Shetty 2) Smt Rajani w/o Girish babu, #533/1, & 4, 5th main, 4th cross, P.J. Extension, Davangere.

**Summons under Order 5 Rule 20(1) (a) of CPC**

Whereas, the Plaintiff bank canara Bank, Saraswathi nagara Branch Davangere has instituted the suit against you for the recovery a sum of Rs. 15,65,282 and for court costs and such other reliefs. You the defendant Hereby summoned to appear in this court in person or by a pleader duly instructed and able to answer all your matirial questions relating to the said suit who shall be accompanied by some person able to answer all such questions, on the 21/4/2025 at Davangere in the forenoon 11 O'clock to answer the claim and as the day fixed for your appearance is appointed for the final desposal of the suit.

Take notice that in default of your appearance on the day before mentioned, the suit will be heard and determined in your absence.

Given under my hand and seal of the court this 7th day of march 2025.

**Sd/- Gopala M.**
**Advocate for plaintiff**
**Davangere. Date : 4.03.2025**

**By the order of the court**
**sd/- Chief Executive Officer**
**Principal District and**
**session Court, Davangere.**


## ಮಲೇಬೆನ್ನೂರು : ಚಿತ್ರಮಂದಿರಕ್ಕೆ ಬೆಂಕಿ, ಹಾನಿ

ಮಲೇಬೆನ್ನೂರಿನಲ್ಲಿ ಮಾ.12- ಪಟ್ಟಣದ ಮೊದಲ ಚಿತ್ರಮಂದಿರ ಎಂಬ ಖ್ಯಾತಿ ಹೊಂದಿರುವ ಶ್ರೀ ಗಣೇಶ ಚಿತ್ರಮಂದಿರದಲ್ಲಿ ಮಂಗಳವಾರ ಬೆಂಕಿ ಆಕಸ್ಮಿಕದಲ್ಲಿ ಕಟ್ಟಡಕ್ಕೆ ಹಾನಿ ಆಗಿದ್ದು, ಯಾವುದೇ ದುರಂತ ಸಂಭವಿಸಿಲ್ಲ.

ಸ್ಥಳಕ್ಕೆ ಆಗಮಿಸಿದ ಪೊಲೀಸರು, ಕೂಡಲೇ ಅಗ್ನಿಶಾಮಕ ದಳದವರನ್ನು ಕರೆಯಿಸಿ ಬೆಂಕಿ ಹರಡುವುದನ್ನು ನಿಯಂತ್ರಿಸಿದರು. ಘಟನೆಯಲ್ಲಿ ಚಿತ್ರಮಂದಿರದ ಒಳಗಡೆ ಇದ್ದ ಕುರ್ಚಿಗಳು ಸುಟ್ಟಿವೆ.

1960 ರಿಂದಲೂ ಚಿತ್ರ ಪ್ರದರ್ಶನ ನೀಡುತ್ತಿದ್ದ ಈ ಚಿತ್ರಮಂದಿರ ಕಳೆದ ಕೆಲವು ವರ್ಷಗಳಿಂದ ನಾನಾ ಕಾರಣಗಳಿಂದಾಗಿ ಪ್ರದರ್ಶನವನ್ನು ನಿಲ್ಲಿಸಿದೆ.

## ನಗರದಲ್ಲಿ ಇಂದು ಬ್ರಾಹ್ಮಣ ಸಮಾಜ ಮಹಿಳಾ ವಿಭಾಗದಿಂದ ವಿವಿಧ ಸ್ಪರ್ಧೆಗಳು

ಬ್ರಾಹ್ಮಣ ಸಮಾಜ ಮಹಿಳಾ ವಿಭಾಗದಿಂದ ಮಹಿಳಾ ದಿನಾಚರಣೆ ಮತ್ತು ವಾರ್ಷಿಕೋತ್ಸವದ ಅಂಗವಾಗಿ ಇಂದು ಸಂಜೆ 4 ಗಂಟೆಗೆ ಬ್ರಾಹ್ಮಣ ಸಮಾಜ ವಿದ್ಯಾರ್ಥಿ ನಿಲಯದಲ್ಲಿ ವಿವಿಧ ಸ್ಪರ್ಧೆಗಳನ್ನು ಬ್ರಾಹ್ಮಣ ಸಮಾಜದ ಮಹಿಳೆಯರಿಗಾಗಿ ಏರ್ಪಡಿಸಲಾಗಿದೆ ಎಂದು ಮಹಿಳಾ ಸಮಾಜದ ಅಧ್ಯಕ್ಷರಾದ ಶ್ರೀಮತಿ ನಳಿನಿ ಅಚ್ಯುತ್ ತಿಳಿಸಿದ್ದಾರೆ. ವಿವರಕ್ಕೆ (9964027146) ಶ್ರೀಮತಿ ಚಂದ್ರಶೇಖರ ಅಡಿಗ, (9886058866) ಅವರನ್ನು ಸಂಪರ್ಕಿಸಬಹುದು.

## ಇಂದು ಪಾರ್ವತಿ - ಕಲೋತ್ಸವ

ಅಂತರರಾಷ್ಟ್ರೀಯ ಮಹಿಳಾ ದಿನೋತ್ಸವ ಅಂಗವಾಗಿ ಬಾಪೂಜಿ ವಿದ್ಯಾಸಂಸ್ಥೆ ವತಿಯಿಂದ ನಡೆಯ ಲಿರುವ ಬಾಪೂಜಿ ವಿದ್ಯಾಸಂಸ್ಥೆಯ ಅಂತರ ಕಾಲೇಜು ಸ್ಪರ್ಧೆಗಳು - 'ಪಾರ್ವತಿ ಕಲೋತ್ಸವ' ಕಾರ್ಯಕ್ರಮದ ಉದ್ಘಾಟನಾ ಸಮಾರಂಭವು ಧ.ರಾ.ಮ ವಿಜ್ಞಾನ ಕಾಲೇಜಿನ ಡಾ. ಎಸ್.ಎಸ್. ಸೆಮಿನಾರ್ ಹಾಲ್‌ನಲ್ಲಿ ಇಂದು ಬೆಳಿಗ್ಗೆ 10ಕ್ಕೆ ನಡೆಯಲಿದೆ. ಮುಖ್ಯ ಅತಿಥಿಯಾಗಿ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಭಾಗವಹಿಸಲಿದ್ದು, ಡಿ.ಆರ್.ಎಂ. ಸೈನ್ಸ್ ಕಾಲೇಜಿನ ನಿವೃತ್ತ ಪ್ರಾಚಾರ್ಯ ರಾದ ಶ್ರೀಮತಿ ಶಕುಂತಲಾ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಎಂ.ಪಿ. ರೂಪಶ್ರೀ ಅಧ್ಯಕ್ಷತೆ ವಹಿಸುವರು.


ಕರ್ನಾಟಕ ಸರ್ಕಾರ
ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ
**ತಾಲ್ಲೂಕು ಪಂಚಾಯತ್ ಕಾರ್ಯಾಲಯ, ನ್ಯಾಮತಿ**
ತಾಲ್ಲೂಕು: ನ್ಯಾಮತಿ, ಜಿಲ್ಲಾ ಪಂಚಾಯತ್ : ದಾವಣಗೆರೆ

ನಂ: ತಾ.ಪಂ.ನ್ಯಾ/ಉಖಾಯೋ/ಸ.ನಿ.(ಗ್ರಾ.ಉ)ಮಾ.ಬಾ.ವಾ/ಸಿ.ಆರ್/2024-25 ದಿನಾಂಕ : 12.03.2025

**ಅಲ್ಪಾವಧಿ ದರಪಟ್ಟಿ ಪ್ರಕಟಣೆ**

ವಿಷಯ: ಸಹಾಯಕ ನಿರ್ದೇಶಕರು (ಗ್ರಾ,ಉ)ತಾಲ್ಲೂಕು ಪಂಚಾಯತಿ ನ್ಯಾಮತಿ ಇವರಿಗೆ ಮಾಸಿಕ ಬಾಡಿಗೆ ಆಧಾರದ ಮೇಲೆ ವಾಹನವನ್ನು ಒದಗಿಸಲು ದರಪಟ್ಟಿಗಳನ್ನು ಆಹ್ವಾನಿಸುವ ಕುರಿತು.

ಉಲ್ಲೇಖ:1.ಸರ್ಕಾರದ ಪತ್ರ ಸಂ:RDC/EGS/141/2021(E-530205),ದಿ:09.05.2022

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಹಾಯಕ ನಿರ್ದೇಶಕರು (ಗ್ರಾ.ಉ) ತಾಲ್ಲೂಕು ಪಂಚಾಯಿತಿ ನ್ಯಾಮತಿಇವರಿಗೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಗ್ರಾಮ ಪಂಚಾಯಿತಿಗಳಲ್ಲಿ ಕಾಮಗಾರಿಗಳ ವೀಕ್ಷಣೆ ಮಾಡಲು ವಾಹನದ ಅವಶ್ಯಕತೆ ಇರುತ್ತದೆ.ಆದ್ದರಿಂದ ಪ್ರತಿ ಮಾಹೆಗೆ ಗರಿಷ್ಠ 35,000/-ರೂ,ಗಳ ಮಿತಿಯಲ್ಲಿ ಮಾಸಿಕ ಬಾಡಿಗೆ ಆಧಾರದ ವಾಹನವನ್ನು ಚಾಲಕರೊಂದಿಗೆ ಒದಗಿಸಲು ದರಪಟ್ಟಿಗಳನ್ನು ಆಹ್ವಾನಿಸಲಾಗಿದ್ದು ಆಸಕ್ತ ಸಂಸ್ಥೆಗಳು ದರಪಟ್ಟಿಗಳನ್ನು ದಿನಾಂಕ : 27.03.2025ರ ಸಂಜೆ 5-00 ಗಂಟೆ ಒಳಗಾಗಿ ಕೆಳಕಂಡ ಷರತ್ತಿಗೊಳಪಟ್ಟು, ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ. ನಂತರ ಬಂದಂತಹ ದರಪಟ್ಟಿಗಳನ್ನು ತಿರಸ್ಕರಿಸಲಾಗುವುದು.

| | |
|---|---|
| ಟೆಂಡರ್ ಪ್ರಕಟಣೆ ಹೊರಡಿಸಿದ ದಿನಾಂಕ : | 12.03.2025 |
| ಟೆಂಡರ್ ಫಾರಂ ನೀಡಲು ಪ್ರಾರಂಭಿಸುವ ದಿನಾಂಕ : | 13.03.2025 |
| ಟೆಂಡರ್ ಫಾರಂ ಪಡೆಯಲು ಅಂತಿಮ ದಿನಾಂಕ: | 26.03.2025 |
| ಟೆಂಡರ್ ಫಾರಂ ಭರ್ತಿ ಮಾಡಿ ಸಲ್ಲಿಸುವ ದಿನಾಂಕ ಮತ್ತು ಸಮಯ : | 27.03.2025 |
| ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ : | 28.03.2025 |
| ಟೆಂಡರ್ ಲಕೋಟೆ ಮೇಲೆ ನಮೂದಿಸಬೇಕಾದ ವಿಳಾಸ : | ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಕಾರ್ಯಾಲಯ, ನ್ಯಾಮತಿ |
| ಸಂಪರ್ಕಿಸಬೇಕಾದ ವಿಳಾಸ : | ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಕಾರ್ಯಾಲಯ, ನ್ಯಾಮತಿ |

ಷರತ್ತುಗಳು : 1. 2020. 2021, 2022,2023 ಮತ್ತು 2024 ಸಾಲಿನ ಮಾದರಿಯ ಸ್ವಿಫ್ಟ್/ಇಟಿಎಸ್ ವಾಹನ ಆಗಿರಬೇಕು. 2. ಚಾಲ್ತಿ ವರ್ಷದ ವಿಮೆ ಹೊಂದಿರಬೇಕು. 3. ಚಾಲ್ತಿ ವರ್ಷಕ್ಕೆ ತೆರಿಗೆ ಪಾವತಿಸಿರಬೇಕು/ಟ್ಯಾಕ್ಸ್ ಕಾರ್ಡ್ ಹೊಂದಿರಬೇಕು. 4. ವಾಹನ ಸುಸ್ಥಿತಿಯಲ್ಲಿರಬೇಕು ಮತ್ತು ಸಾರಿಗೆ ಇಲಾಖೆಯಿಂದ ದೃಢೀಕರಣ (ಎಫ್.ಸಿ) ನೀಡಬೇಕು. 5. ವಾಹನವು ಹಳದಿ ಬೋರ್ಡ್ ಅಡಿಯಲ್ಲಿ ರಿಜಿಸ್ಟ್ರೇಷನ್ ಆಗಿರಬೇಕು. 6. ವಾಹನದ ಯಾವುದೇ ತರಹದ ದುರಸ್ತಿ ನಿರ್ವಹಣೆ ಮತ್ತು ತಗಲುವ ಇಂಧನ ಮಾಲೀಕರದ್ದೇ ಆಗಿರುತ್ತದೆ. 7. ಅನುಭವಿ ವಾಹನ ಚಾಲಕರಿರಬೇಕು ಮತ್ತು ಚಾಲ್ತಿ ವಾಹನ ಚಾಲನಾ ಪರವಾನಗಿ ಹೊಂದಿರಬೇಕು ಮತ್ತು ವಾಹನ ಚಾಲಕರಿಗೆ ಯಾವುದೇ ಭತ್ಯೆ ನೀಡಲಾಗುವುದಿಲ್ಲ. 8. ಕಛೇರಿಯ ನಿಗದಿತ ಅವಧಿಯಲ್ಲಿ ವಾಹನವನ್ನು ತರುವುದು. 9. ಶೇ. 2% ರಷ್ಟು ಆದಾಯ ತೆರಿಗೆಯನ್ನು ಕಡಿತಗೊಳಿಸಲಾಗುವುದು. 10. ಪ್ರತಿ ತಿಂಗಳ ಲಾಗ್ ಬುಕ್ ನಿರ್ವಹಣೆ ಮಾಡುವುದು. 11. ಅನುದಾನ ಲಭ್ಯತೆ ಆಧಾರದ ಮೇಲೆ ಹಣ ಪಾವತಿಸಲಾಗುವುದು.

ಸಹಿ/- ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ನ್ಯಾಮತಿ.



**HARINI PU COLLEGE**
**HAGRIBOMMANAHALLI.VIJAYANAGARA DIST.**

**FACULTY REQUIRED**

**Walk in interview for recruitment of lecturers and principal/administrative officer.**

**Subjects:** PHYSICS, CHEMISTRY MATHEMATICS, BIOLOGY.

**Experience:** For lecturers minimum of 5 years of teaching PUC/CET/NEET/JEE.

A demo class will be taken for respective Subjects

For principal/administrative officer, a minimum of 4 years of experience in administration of PU COLLEGE.

**Date of interview: 16.03.2025 Sunday. Place of interview :**

**EURO KIDS CAMPUS**
OPP BIET, SHAMANUR ROAD, DAVANAGERE
**For details contact: 9449980200, 9986340867**

## ಆನೆಕೊಂಡದಲ್ಲಿ ನಾಳೆ ಶ್ರೀ ಬಸವೇಶ್ವರ ಸ್ವಾಮಿ ರಥೋತ್ಸವ



ದಾವಣಗೆರೆ, ಮಾ. 12 - ಶ್ರೀ ಕ್ಷೇತ್ರ ಆನೆಕೊಂಡದ ಶ್ರೀ ಬಸವೇಶ್ವರ ಸ್ವಾಮಿ ಮತ್ತು ಶ್ರೀ ಕ್ಷೇತ್ರ ನೀಲಾನಹಳ್ಳಿಯ ಶ್ರೀ ಆಂಜನೇಯ ಸ್ವಾಮಿಗಳ ರಥೋತ್ಸವವು ನಾಡಿದ್ದು ದಿನಾಂಕ 14ರ ಶುಕ್ರವಾರ ರಾತ್ರಿ 10.30ಕ್ಕೆ ನಡೆಯಲಿದೆ ಎಂದು ದೇವಸ್ಥಾನದ ಕನ್ವೀನರ್ ಗೌಡ್ರು ಅಜ್ಜಪ್ಪ ತಿಳಿಸಿದ್ದಾರೆ.


## ಬೇಕಾಗಿದ್ದಾರೆ

ನಮ್ಮ ಶೋ ರೂಮ್‌ನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.

ಶಾಂತಲಾ ದಿ ವೆಡ್ಡಿಂಗ್ ಮಾಲ್......

ಡೆಂಟಲ್ ಕಾಲೇಜು ರಸ್ತೆ, ದಾವಣಗೆರೆ. ಮೊ. 96861 95329


## ಎ.ಆರ್. ಇಂದಿರಾ ಸಿದ್ದೇಶ್‌ಗೆ ಅಕ್ಕ ರಾಜ್ಯ ಪ್ರಶಸ್ತಿ ಪುರಸ್ಕಾರ



ದಾವಣಗೆರೆ, ಮಾ. 12 - ಅಕ್ಕನ ಮನೆ ಪ್ರತಿಷ್ಠಾನದ ವತಿಯಿಂದ ಬೆಂಗಳೂರಿನ ಕನ್ನಡ ಭವನದಲ್ಲಿ ನಿನ್ನೆ ನಡೆದ ಕಾರ್ಯಕ್ರಮದಲ್ಲಿ ಸ್ಥಳೀಯ ತರಳಬಾಳು ನಗರದವರಾದ ಜರೇಕಟ್ಟೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಶ್ರೀಮತಿ ಎ.ಆರ್. ಇಂದಿರಾ ಸಿದ್ದೇಶ್ ಅವರಿಗೆ ಅವರ ಶಿಕ್ಷಣ ಮತ್ತು ಸಾಹಿತ್ಯ ಸೇವೆಯನ್ನು ಪರಿಗಣಿಸಿ, ಅಕ್ಕ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು.


## ಅಭಿನಂದನೆಗಳು




“ಲೀಲಾ ಪ್ಯಾಲೇಸ್, ಚಾಣಕ್ಯಪುರಿ” ನವದೆಹಲಿಯಲ್ಲಿ ದಿನಾಂಕ 06.03.2025 ರಂದು ನಡೆದ ವಿವಿಧ ವಲಯಗಳಿಂದ ಭಾರತದಾದ್ಯಂತ ಬಂದ 27,467 ನಾಮನಿರ್ದೇಶನಗಳಲ್ಲಿ ಭಾರತ SME100 ಫೋರಂ, 11ನೇ ಆವೃತ್ತಿಯಲ್ಲಿ M/s Ensafeguard Security Private Limited ಅನ್ನು ಆಯ್ಕೆ ಮಾಡಿದೆ. ಕಂಪನಿಯು ಭಾರತದಲ್ಲಿ ಸಮಗ್ರ ಭದ್ರತೆ, ಗೃಹೋಪಯೋಗಿ ಸೌಲಭ್ಯ ನಿರ್ವಹಣೆ ಮತ್ತು ಮಾನವಶಕ್ತಿ ಸೇವೆಯನ್ನು ಒದಗಿಸುವ ಕ್ಷೇತ್ರದಲ್ಲಿ ಭಾರತದ ಟಾಪ್ 100 ಉದ್ಯಮಗಳಲ್ಲಿ ಸ್ಥಾನ ಪಡೆದಿದೆ ಮತ್ತು ಕಂಪನಿಯು ಸುರಕ್ಷತೆ, ದಕ್ಷತೆ ಮತ್ತು ಕಾರ್ಯಾಚರಣೆಯ ಶ್ರೇಷ್ಠತೆಗೆ ಬದ್ಧವಾಗಿರುವ ವಿವಿಧ ಖಾಸಗಿ ಮತ್ತು ಸಾರ್ವಜನಿಕ ವಲಯದ ಘಟಕಗಳಿಗೆ ಉತ್ತಮ ಗುಣಮಟ್ಟದ ಸೇವೆಗಳೊಂದಿಗೆ 10 ವರ್ಷಗಳಿಂದ ತರಬೇತಿ ಪಡೆದ ಭದ್ರತಾ ಸಿಬ್ಬಂದಿ ಮತ್ತು ಸೌಲಭ್ಯ ನಿರ್ವಹಣೆಯನ್ನು ನೀಡುತ್ತಿದೆ. ಕಂಪನಿಯು CAPSI (ಅಂದರೆ ಸೆಂಟ್ರಲ್ ಅಸೋಸಿಯೇಷನ್ ಆಫ್ ಪ್ರೈವೇಟ್ ಸೆಕ್ಯುರಿಟಿ ಇಂಡಸ್ಟ್ರಿ, ನವದೆಹಲಿ) ಸದಸ್ಯರೂ ಆಗಿದೆ. INDIA SME ಫೋರಂ, M/s Ensafeguard Security Private Limited ಅನ್ನು INIDAಯ ಟಾಪ್ 100 ಕಂಪನಿಗಳಾಗಿ ಪಟ್ಟಿ ಮಾಡಿದೆ. 100% ಅನುಸರಣೆ ಮತ್ತು ಉತ್ತಮ ಹಣಕಾಸಿನೊಂದಿಗೆ ತಮ್ಮ ಗ್ರಾಹಕರಿಗೆ ಸೇವೆಗಳನ್ನು ಒದಗಿಸುವ ಕಂಪನಿಯ ಸೇವೆ ಮತ್ತು ಗುಣಮಟ್ಟವನ್ನು ಆಧರಿಸಿ, ಶ್ರೀ ಮೊಹಮ್ಮದ್ ಜುಬೈರ್ ಬಿನ್ ದಿವಂಗತ ಹಾಜಿ ಮೊಹಮ್ಮದ್ ಇಕ್ಬಾಲ್ ಧರ್ವಾರ್ಕರ್ ಅವರಿಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ.

ಆಯ್ಕೆ ಪ್ರಕ್ರಿಯೆ: ಪ್ರತಿ ವರ್ಷ, ಪ್ರಖ್ಯಾತ ತೀರ್ಪುಗಾರರು ಆರು ಪ್ರಮುಖ ವಿಭಾಗಗಳಲ್ಲಿ ಒಟ್ಟಾರೆ ಕಾರ್ಯಕ್ಷಮತೆಯ ಆಧಾರದ ಮೇಲೆ ಟಾಪ್ 100 SME ಗಳನ್ನು ಆಯ್ಕೆ ಮಾಡಲು ಸಾವಿರಾರು ನಾಮನಿರ್ದೇಶನಗಳನ್ನು ಮೌಲ್ಯಮಾಪನ ಮಾಡುತ್ತಾರೆ:
* ಬೆಳವಣಿಗೆ, * ಆರ್ಥಿಕ ಶಕ್ತಿ, * ನಾವೀನ್ಯತೆ, * ಅಂತರರಾಷ್ಟ್ರೀಯ ದೃಷ್ಟಿಕೋನ, * ಕಾರ್ಪೊರೇಟ್ ಆಡಳಿತ, * ಪೀಪಲ್ ಕ್ಯಾಪಿಟಲ್

ಶುಭಕೋರುವವರು

M/s Ensafeguard Security Private Limited ಆಡಳಿತ ಮಂಡಳಿ, ಸಿಬ್ಬಂದಿವರ್ಗ ಮತ್ತು ಸ್ನೇಹಿತರು.











KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas